ಸಂಪಾದಕರು :
ಎಂ.ಎಸ್. ವಿಕಾಸ್

ಗುರುವಾರ, ನವೆಂಬರ್ 23, 2023
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 191 RNI : 27369/75

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

50 1974 2023

janathavani@mac.com
www.janathavani.com
☎ 08192 254736 91642 99999

## ಶಿರಡಿ ಸಾಯಿಬಾಬಾ ಸರ್ವಧರ್ಮಗಳ ಪ್ರತೀಕ

### ಜಗಳೂರು: ಸಾಯಿಬಾಬಾ ದೇವಾಲಯ ಉದ್ಘಾಟನಾ ಕಾರ್ಯಕ್ರಮದಲ್ಲಿ ಸುತ್ತೂರು ಶ್ರೀ

ಜಗಳೂರು, ನ.22- ಮಸೀದಿಯಲ್ಲಿ ವಾಸ ಮಾಡುತ್ತಿದ್ದ ಶಿರಡಿ ಸಾಯಿಬಾಬಾ ಸರ್ವಧರ್ಮಗಳ ಸಂಕೇತವಾಗಿದ್ದರು ಎಂದು ಸುತ್ತೂರು ಮಠದ ಶ್ರೀ ಶಿವರಾತ್ರಿ ಜಗದ್ಗುರು ದೇಶಿಕೇಂದ್ರ ಸ್ವಾಮೀಜಿ ಹೇಳಿದರು.

ತಾಲ್ಲೂಕಿನ ಸೊಕ್ಕೆ ಗ್ರಾಮದಲ್ಲಿ ಶಿರಡಿ ಸಾಯಿಬಾಬಾ ದೇವಾಲಯ ಮತ್ತು ವಿಮಾನ ಗೋಪುರ, ಶಿಲಾಮೂರ್ತಿ ಪ್ರಾಣ ಪ್ರತಿಷ್ಠಾಪನಾ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು.



ವಿಶ್ವವ್ಯಾಪಿ ಭಕ್ತರು ಸಾಯಿಬಾಬಾ ಅವರನ್ನು ನಂಬಿ, ಕಷ್ಟ ಸಂಕೋಲೆಗಳಿಂದ ಮುಕ್ತರಾಗುತ್ತಿದ್ದಾರೆ, ನೆಮ್ಮದಿ ಕಾಣುತ್ತಿದ್ದಾರೆ.

ಶಿರಡಿ ಒಂದು ಜಾಗೃತ ಸ್ಥಳವಾಗಿದ್ದು, ಶಿರಡಿಯನ್ನು ಹೊರತುಪಡಿಸಿದರೆ ಸಾಯಿಬಾಬಾ ಅವರ ಮೂಲ ಸ್ಥಾನದ ಬಗ್ಗೆ ಈವರೆಗೂ ಯಾವುದೇ ಕುರುಹುಗಳಿಲ್ಲ. ಜಗತ್ತಿಗೆ ಒಳಿತು ಮಾಡುವುದೇ ಅವರ ಉದ್ದೇಶವಾಗಿತ್ತು. ಶ್ರದ್ಧಾಭಕ್ತಿಗಳಿಂದ ಅವರನ್ನು ಗೌರವಿಸಿದರೆ, ಅವರ ಪಾಲಿಗೆ ಸಂಜೀವಿನಿಯಾಗುತ್ತಾರೆ. ನಮ್ಮ ಮಠದ ಸಂಸ್ಥೆಯಲ್ಲಿ ಅಧ್ಯಾಪಕರಾಗಿ ಸೇರ್ಪಡೆಗೊಂಡು, ಸೇವಾ ಕ್ಷೇತ್ರದ ವಿವಿಧ ಆಯಾಮಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ ತಿಪ್ಪೇಸ್ವಾಮಿ ಅವರು ಶ್ಲಾಘನೀಯ ಕಾರ್ಯ ಮಾಡಿದ್ದಾರೆ ಎಂದರು.

ಕಣ್ವಕುಪ್ಪೆ ಗವಿಮಠದ ಶ್ರೀ ನಾಲ್ವಡಿ ಶಾಂತಲಿಂಗ ಮಹಾಸ್ವಾಮೀಜಿ ದಿವ್ಯ ಸಾನ್ನಿಧ್ಯ ವಹಿಸಿ, ವ್ಯಾಸಮುನಿಗಳ ಆಶಯದಂತೆ ಪರೋಪಕಾರದಿಂದ ಪುಣ್ಯಪ್ರಾಪ್ತಿ ಲಭಿಸುತ್ತದೆ. ಪ್ರಕೃತಿಯಲ್ಲಿನ ಜೀವಸಂಕುಲದ ಅಗತ್ಯತೆ ನೀಗಿಸುವ ವೃಕ್ಷಗಳು, ನದಿ, ಹಸುಗಳು ಇದಕ್ಕೆ ಜೀವಂತ ಸಾಕ್ಷಿಯಾಗಿವೆ. ಮನುಷ್ಯನಿಗೆ ಆಪತ್ತು ಎದುರಾದ ಸಂದರ್ಭದಲ್ಲಿ ನಮ್ಮನ್ನು ರಕ್ಷಿಸುವುದು ಪಾಪ, ಪುಣ್ಯಗಳು ಎಂದು ಕಿವಿಮಾತು ಹೇಳಿದರು.

ಕೃಷಿ ಸಚಿವ ಚಲುವರಾಯಸ್ವಾಮಿ ಮಾತನಾಡಿ, ಭಾರತ ದೇಶ ಸಾಧು (4ನೇ ಪುಟಕ್ಕೆ)

## ಹೆಗಡೆ ಅಧಿಕಾರವಧಿ ವಿಸ್ತರಣೆ

**ಲಿಂಗಾಯತ, ಒಕ್ಕಲಿಗ ಸಮುದಾಯಗಳ ವಿರೋಧದ ನಡುವೆ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರ ಅವಧಿ ವಿಸ್ತರಣೆ**

ಬೆಂಗಳೂರು, ನ. 22 - ಜಾತಿ ಗಣತಿಗೆ ವೀರಶೈವ-ಲಿಂಗಾಯತ, ಒಕ್ಕಲಿಗ ಸಮುದಾಯ ಗಳ ವಿರೋಧಕ್ಕೆ ತಲೆಬಾಗಿರುವ ರಾಜ್ಯ ಸರ್ಕಾರ ಆಂತರಿಕವಾಗಿ ಕೆಲವು ಬದಲಾವಣೆ ಮಾಡಲು ಹಿಂದುಳಿದ ವರ್ಗಗಳ ಶಾಶ್ವತ ಆಯೋಗದ ಅಧ್ಯಕ್ಷ ಜಯಪ್ರಕಾಶ್ ಹೆಗಡೆ ಅವರ ಅಧಿಕಾರವಧಿಯನ್ನು ಒಂದು ತಿಂಗಳ ಮಟ್ಟಿಗೆ ವಿಸ್ತರಿಸಿ ಸರ್ಕಾರ ಆದೇಶಿಸಿದೆ.

ಕಾಂತರಾಜ್ ನೀಡಿರುವ ವರದಿಯಲ್ಲಿ ಲಿಂಗಾಯತ, ಒಕ್ಕಲಿಗ ಸೇರಿದಂತೆ ಮುಂದುವರೆದ ಜಾತಿಗಳನ್ನು ಆಂತರಿಕವಾಗಿ ವಿಭಜಿಸಿ ಸಮುದಾಯಗಳನ್ನು ಗುಂಪುಗಳಾಗಿ ಒಡೆಯಲಾಗಿತ್ತು. ಇದರಿಂದ ಈ ಎರಡೂ ಸಮುದಾಯಗಳು ಇತರೆ ಸಮುದಾಯಗಳಿಗಿಂತ ಅಂಕಿ-ಸಂಖ್ಯೆಯಲ್ಲಿ ಕೆಳಮಟ್ಟಕ್ಕೆ ಹೋಗಿದ್ದವು.

ಶಾಶ್ವತ ಆಯೋಗ ನೀಡಿರುವ ವರದಿಯ ಅಂಕಿ - ಅಂಶಗಳಲ್ಲಿ ಯಾವುದೇ ಬದಲಾವಣೆ ಇಲ್ಲ, ಆದರೆ, ಸಮುದಾಯಗಳ ಆಂತರಿಕ (4ನೇ ಪುಟಕ್ಕೆ)

## ಜನವರಿಗೆ ದೇಶದ್ರೋಹ ಸಿಂಧುತ್ವದ ವಿಚಾರಣೆ

ನವದೆಹಲಿ, ನ. 22 - ಭಾರತೀಯ ದಂಡ ಸಂಹಿತೆ (ಐ.ಪಿ.ಸಿ.)ಯಲ್ಲಿರುವ ದೇಶದ್ರೋಹದ ಸಿಂಧುತ್ವ ಕುರಿತು ಸುಪ್ರೀಂ ಕೋರ್ಟ್ ಜನವರಿಯಲ್ಲಿ ವಿಚಾರಣೆ ನಡೆಸಲಿದೆ. ದೇಶದ್ರೋಹ ಅಂಶವನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ನಲ್ಲಿ ಹಲವು ಅರ್ಜಿಗಳು ದಾಖಲಾಗಿವೆ. ಈ ಬಗ್ಗೆ ವಿಚಾರಣೆ ನಡೆಸಲು ಸೂಕ್ತ ಪೀಠವೊಂದನ್ನು ರಚಿಸಲಾಗುವುದು ಎಂದು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ತಿಳಿಸಿದ್ದಾರೆ.

ಐಪಿಸಿಯಲ್ಲಿ ಬದಲಾವಣೆ ತರುವ ಮಸೂದೆಯನ್ನು ಈಗಾಗಲೇ ಕೇಂದ್ರ ಸರ್ಕಾರ ರೂಪಿಸುತ್ತಿದೆ. ಹೀಗಾಗಿ ಸುಪ್ರೀಂ ಕೋರ್ಟ್ ವಿಚಾರಣೆ ಕೈ ಬಿಡಬೇಕು ಎಂದು ಕೇಂದ್ರ ಸರ್ಕಾರ ಮನವಿ ಮಾಡಿಕೊಂಡಿತ್ತು. ಆದರೆ, ವಿಚಾರಣೆ ನಡೆಸುವುದಾಗಿ ಸುಪ್ರೀಂ ಕೋರ್ಟ್ ಹೇಳಿತ್ತು. ಕೇಂದ್ರ ಹೊಸ ಕಾಯ್ದೆ ಜಾರಿಗೆ ತಂದರೂ ಸಹ ಅದು ಪೂರ್ವಾನ್ವಯವಾಗುವುದಿಲ್ಲ. ಹೀಗಾಗಿ ದೇಶದ್ರೋಹದ ಅಂಶ ಮುಂದುವರೆದಿರುತ್ತದೆ ಎಂದು ಸುಪ್ರೀಂ ಕೋರ್ಟ್ ತಿಳಿಸಿತ್ತು.

## ವಾರದಲ್ಲೇ ಬರ ಪರಿಹಾರ ನಿರೀಕ್ಷೆ

### ಇಂದು ದೆಹಲಿಗೆ ಸಚಿವರ ನಿಯೋಗ: ಕೃಷಿ ಸಚಿವ ಚಲುವರಾಯಸ್ವಾಮಿ

ದಾವಣಗೆರೆ, ನ. 22 - ಬರ ಪರಿಹಾರಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಕಳಿಸಿದ ವರದಿಯ ಬಗ್ಗೆ ಕೇಂದ್ರ ಸರ್ಕಾರ ಅಂತಿಮ ನಿರ್ಧಾರ ತೆಗೆದುಕೊಂಡಿರುವ ಸೂಚನೆಗಳು ದೊರೆತಿವೆ ಎಂದು ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ತಿಳಿಸಿದ್ದಾರೆ

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದ ಸಚಿವರ ನಿಯೋಗ ಭೇಟಿ ಮಾಡಲು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ನಾಳೆ ಗುರುವಾರ ಸಮಯ ನೀಡಿದ್ದಾರೆ ಎಂದು ಹೇಳಿದರು.

ರಾಜ್ಯ ಸರ್ಕಾರ ಈಗಾಗಲೇ 17,900 ಕೋಟಿ ರೂ.ಗಳ ಬರ ಪರಿಹಾರಕ್ಕಾಗಿ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಿದೆ. ಈ ಬಗ್ಗೆ ಕೇಂದ್ರ ಸರ್ಕಾರ ಪರಿಶೀಲಿಸಿ ನಿರ್ಧಾರಕ್ಕೆ ಬಂದಿರುವಂತಿದೆ. ಹೀಗಾಗಿಯೇ ರಾಜ್ಯ ಸಚಿವರ ನಿಯೋಗಕ್ಕೆ ಸಮಯ ನೀಡಿದೆ ಎಂದವರು ತಿಳಿಸಿದರು.

ನಾನು, ಸಚಿವರಾದ ಕೃಷ್ಣ ಭೈರೇಗೌಡ ಹಾಗೂ ಪ್ರಿಯಾಂಕ ಖರ್ಗೆ ದೆಹಲಿಗೆ ತೆರಳಿ ಕೇಂದ್ರ ಹಣಕಾಸು ಸಚಿವರ ಜೊತೆ ಚರ್ಚಿಸಲಿದ್ದೇವೆ. ಈ ವಾರದಲ್ಲೇ ಪರಿಹಾರ ಬಿಡುಗಡೆಯಾಗುವ ನಿರೀಕ್ಷೆ ಇದೆ. ತಿಂಗಳ ಅಂತ್ಯದ ಒಳಗೆ ರೈತರ ಖಾತೆಗಳಿಗೆ ಜಮಾ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದು ಎಂದು ಹೇಳಿದರು.

ರಾಜ್ಯ ಸರ್ಕಾರ 223 ತಾಲ್ಲೂಕುಗಳನ್ನು ಬರ ಪೀಡಿತ ಎಂದು ಘೋಷಿಸಿದೆ. ಈ ಬಾರಿ ಬೆಳೆ ವಿಮೆ ಪಡೆದ ರೈತರಿಗೆ ಉತ್ತಮ ಪರಿಹಾರ ಸಿಗುವ ನಿರೀಕ್ಷೆ ಇದೆ. ವಿಮಾ ಪರಿಹಾರ ಹಣ ವಿತರಣೆಗಾಗಿ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ ಎಂದು ಸಚಿವರು ತಿಳಿಸಿದರು.

ರಾಜ್ಯ ಸರ್ಕಾರದ (4ನೇ ಪುಟಕ್ಕೆ)



### ಡಿಸೆಂಬರ್ ಒಳಗೆ ಕೃಷಿ ಯೋಜನೆಗಳ ಜಾರಿಗೆ ಅಧಿಕಾರಿಗಳಿಗೆ ಸೂಚನೆ

ದಾವಣಗೆರೆ, ನ. 22 - ಕೃಷಿ ಭಾಗ್ಯ ಯೋಜನೆಯಡಿ ಹೊಲಗಳಲ್ಲಿ ಹೊಂಡ ನಿರ್ಮಿಸುವುದೂ ಸೇರಿದಂತೆ, ಕೃಷಿ ಇಲಾಖೆ ಸಂಬಂಧಿತ ಎಲ್ಲ ಯೋಜನೆಗಳನ್ನು ಡಿಸೆಂಬರ್ ಒಳಗೆ ಜಾರಿಗೆ ತರಲು ಕ್ರಮ ತೆಗೆದುಕೊಳ್ಳಬೇಕು ಎಂದು ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ತಿಳಿಸಿದರು.

ತಮ್ಮ ಅಧ್ಯಕ್ಷತೆಯಲ್ಲಿ ಜಿಲ್ಲಾ ಪಂಚಾಯ್ತಿ ಸಭಾಂಗಣದಲ್ಲಿ ಕರೆಯಲಾಗಿದ್ದ ಕೃಷಿ ಅಧಿಕಾರಿಗಳ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ರಾಜ್ಯ ಸರ್ಕಾರ ಕೃಷಿ ಭಾಗ್ಯ ಯೋಜನೆ ಮತ್ತೆ ಜಾರಿಗೆ ತಂದಿದೆ. ಈ ಬಾರಿ 30 ಸಾವಿರ ಕೃಷಿ ಹೊಂಡಗಳನ್ನು ನಿರ್ಮಿಸುವ ನಿರ್ಧಾರ ತೆಗೆದುಕೊಳ್ಳಲಾಗಿದೆ. ಕೃಷಿ ಹೊಂಡಗಳಿಗಾಗಿ ಜಿ.ಪಂ. ಸಿಇಒ ಅಧ್ಯಕ್ಷತೆಯಲ್ಲಿ ಸಮಿತಿಗಳನ್ನು ರಚಿಸಲಾಗುವುದು ಎಂದು ಹೇಳಿದರು.

ರಾಜ್ಯ ಈ ಬಾರಿ ತೀವ್ರ ಬರಪೀಡಿತವಾಗಿದೆ. ಹೀಗಾಗಿ ಈ ಬಾರಿ ಬೆಳೆ ವಿಮೆ ಮಾಡಿಸಿಕೊಂಡ ರೈತರಿಗೆ ಹೆಚ್ಚಿನ ಪರಿಹಾರ ಸಿಗಲಿದೆ. ಪರಿಹಾರ ರೈತರಿಗೆ ತಲುಪಿಸಲು ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳಬೇಕು ಎಂದು ಸಚಿವರು ತಿಳಿಸಿದರು. ಬೆಳೆ ಸಮೀಕ್ಷೆ ವೇಳೆ ಉದಾರವಾಗಿ ನಡೆದುಕೊಳ್ಳಬೇಕು. ಈ ಬಗ್ಗೆ ಮುಖ್ಯಮಂತ್ರಿಗಳೇ ಸೂಚನೆ ನೀಡಿದ್ದಾರೆ ಎಂದೂ ಚಲುವರಾಯಸ್ವಾಮಿ ಹೇಳಿದರು.

**ತೊಗರಿಗೆ ಪ್ರೋತ್ಸಾಹಿಸಿ :** ಕಬ್ಬಿನ ಜೊತೆಗೆ ತೊಗರಿ ಬೆಳೆಯಲು ಇತ್ತೀಚೆಗೆ ನಡೆಸಿದ ಪ್ರಯೋಗ ಯಶಸ್ವಿಯಾಗಿದೆ. ಕಬ್ಬಿಗಿಂತ (4ನೇ ಪುಟಕ್ಕೆ)

### ಬೆಳೆ ವಿಮೆಗೆ ರಾಜ್ಯದಿಂದಲೇ ವ್ಯವಸ್ಥೆ?

**ಬೆಳೆ ವಿಮೆ ಯೋಜನೆಯಲ್ಲಿ ಕೊರತೆಗಳಿವೆ. ಹೆಚ್ಚು ಮಳೆಯಾಗುವ ತಾಲ್ಲೂಕುಗಳ ರೈತರಿಗೆ ಬೆಳೆ ವಿಮೆಯಿಂದ ಹೆಚ್ಚು ಪ್ರಯೋಜನವಾಗುತ್ತಿಲ್ಲ. ಹೀಗಾಗಿ ರೈತರು ಬೆಳೆ ವಿಮೆಗೆ ಹಿಂಜರಿಯುತ್ತಿದ್ದಾರೆ ಎಂದು ಕೃಷಿ ಇಲಾಖೆ ಜಂಟಿ ನಿರ್ದೇಶಕ ಶ್ರೀನಿವಾಸ್ ಚಿಂತಾಲ್ ತಿಳಿಸಿದರು.**

**ಕೇಂದ್ರ ಹಾಗೂ ರಾಜ್ಯ ಸರ್ಕಾರಗಳೆರಡೂ ಈ ಯೋಜನೆಯಲ್ಲಿ ಭಾಗಿಯಾಗಿವೆ. ಬೆಳೆ ವಿಮೆ ನಿಯಮಗಳ ಬದಲಾವಣೆಗಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿದ್ದಾರೆ. ಕೇಂದ್ರ ಹಾಗೂ ರಾಜ್ಯಗಳೆರಡೂ ಸೇರಿ ಬದಲಾವಣೆ ತರಬೇಕು. ಇಲ್ಲವಾದರೆ, ರಾಜ್ಯದಿಂದಲೇ ಬೆಳೆ ವಿಮೆಗೆ ಬೇರೆ ವ್ಯವಸ್ಥೆ ಮಾಡಬೇಕಾಗುತ್ತದೆ ಎಂದು ಸಚಿವ ಚಲುವರಾಯ ಸ್ವಾಮಿ ಹೇಳಿದರು.**

## ಮದ್ಯಕ್ಕಾಗಿ ಯುಪಿಐ ಮೂಲಕ ಲಂಚ

**ಗುಜರಾತ್‌ನ ಹತ್ತು ಸಂಚಾರಿ ಪೊಲೀಸರ ವಿರುದ್ಧ ಕ್ರಮ**

ಅಹಮದಾಬಾದ್, ನ. 22 - ದೆಹಲಿಯ ಉದ್ಯಮಿ ತಮ್ಮ ಕಾರಿನಲ್ಲಿ ಮದ್ಯ ಸಾಗಿಸುತ್ತಿದ್ದರು ಎಂಬ ಕಾರಣಕ್ಕೆ 20 ಸಾವಿರ ರೂ. ಲಂಚ ಪಡೆದ ಗುಜರಾತ್‌ನ ಮೂವರು ಸಂಚಾರಿ ಪೊಲೀಸರನ್ನು ವಜಾಗೊಳಿಸಲಾಗಿದೆ ಹಾಗೂ ಏಳು ಸಿಬ್ಬಂದಿಯನ್ನು ಅಮಾನತ್ತುಗೊಳಿಸಲಾಗಿದೆ.

ಉದ್ಯಮಿ ಕಣವ್ ಮಂಚಂದ ಅವರಿಂದ 20 ಸಾವಿರ ರೂ. ಹಣ ವಸೂಲಿ ಮಾಡುತ್ತಿದ್ದ ವಿಡಿಯೋ ಬೆಳಕಿಗೆ ಬಂದ ನಂತರ ಕ್ರಮ ತೆಗೆದುಕೊಳ್ಳಲಾಗಿದೆ.

ಮಂಚಂದ ಅವರು ಐ.ಸಿ.ಸಿ. ವಿಶ್ವಕಪ್ ಅಂತಿಮ ಪಂದ್ಯ ವೀಕ್ಷಣೆಗಾಗಿ ಇಲ್ಲಿಗೆ ಬಂದಿದ್ದರು. ಹಣ ವಸೂಲಿಯ ಬಗ್ಗೆ ಅವರು ದೂರು ನೀಡಿರಲಿಲ್ಲ. ಆದರೂ, ವಿಡಿಯೋ ಆಧರಿಸಿ ಕ್ರಮ ತೆಗೆದುಕೊಳ್ಳಲಾಗಿದೆ.

ಈ ಘಟನೆಯ ಬಗ್ಗೆ ವಿಸ್ತೃತ ತನಿಖೆಗೆ ಆದೇಶಿಸಲಾಗಿದೆ. ಪ್ರಾಥಮಿಕ ತನಿಖೆ ಆಧರಿಸಿ (2ನೇ ಪುಟಕ್ಕೆ)

FREE COACHING FOR CET - NEET - 2024
2nd PUC - PCMB
Long term NEET students
Call: 9739865711
# Shortcuts & tricks
# Solving previous year question papers.
# Memory techniques.
# Speed calculations.
Address: Gurudatt Academy Rangamahal, AVK College Road, Davangere.

## ಚಿರಸ್ಮರಣೆ





**ಡಾ|| ಕೆ. ಕರಿಯಪ್ಪ**
ದೈವಾಧೀನ : 23.11.1999

**ಶ್ರೀಮತಿ ಕೌಸಲ್ಯ ಕರಿಯಪ್ಪ**
ದೈವಾಧೀನ : 12.11.2021

**ಶ್ರೀ ರಾಮಕೃಷ್ಣ ನರ್ಸಿಂಗ್ ಹೋಮ್**
ಪಿ.ಜೆ. ಬಡಾವಣೆ, 8ನೇ ಮುಖ್ಯರಸ್ತೆ, ದಾವಣಗೆರೆ.

ನಿಮ್ಮ ಆಶೀರ್ವಾದದಿಂದ ಬೆಳಗುತ್ತಿರುವ,

ಮಕ್ಕಳು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು.

ಸಿಬ್ಬಂದಿ ವರ್ಗ, ಶ್ರೀ ರಾಮಕೃಷ್ಣ ನರ್ಸಿಂಗ್ ಹೋಮ್, ದಾವಣಗೆರೆ.
ಸಿಬ್ಬಂದಿ ವರ್ಗ, ಸಂತಾನ ಫರ್ಟಿಲಿಟಿ ಸೆಂಟರ್, ದಾವಣಗೆರೆ.
ಸಿಬ್ಬಂದಿ ವರ್ಗ, ಶ್ರೀ ರಾಮಕೃಷ್ಣ ಮೆಡಿಕಲ್ಸ್, ದಾವಣಗೆರೆ.
ಸಿಬ್ಬಂದಿ ವರ್ಗ, ಅಜಿತ್ ನರ್ಸಿಂಗ್ ಹೋಂ, ರಾಯಬಾಗ್.

Join SIR MV
to become a Ranker in
CET/NEET/IIT (Mains & Advanced)
2024
For 1st PUC
Admission Enquiry
Scan QR Code or
Visit our Website
www.sirmveducation.com
Scan for Enquiry
NEET-2022 NEET MARKS 705/720
STATE 1st
NEET-2020 NEET MARKS 703/720
All India Rank 3rd
NEET-2023 NEET MARKS 680/720
PU-2023 PU MARKS 592/600
Distinctions 887
First Class 465
Outcome of NEET - 2023
BMC, Bangalore - 19 Students
VIMS, Ballari - 19 Students
KIMS, Hubli - 15 Students
SIMS, Shimogga - 14 Students
GIMS, Gadag - 14 Students
JJMMC, Davangere - 13 Students
MIMS, Mysore - 09 Students
KMC, Koppal - 09 Students
SMC, Shivamogga - 09 Students
RIMS, Raichur - 07 Students
And Many More...
•10 IIT •18 NIT •8 IIIT •9 AIIMS
300+ Free Medical seats in NEET - 2023
SIR M V GROUP OF INSTITUTIONS
SIR MV PU COLLEGE
SIR MV COMPOSITE
PU COLLEGE, DAVANGERE.
Ph: 08192-261200
9243312223, 87221 41400.
SRI VIDYA BHARATHI
PRE-UNIVERSITY (IND)
COLLEGE, SHIMOGA
Ph: 9148684483
9035141142, 8088350265
SATYAM
PU COLLEGE,
BALLARI
Ph: 8197764018
9945377965

# ಸಿದ್ರಾಮಯ್ಯ ಆಡಳಿತ ಹದಗೆಟ್ಟಿದೆ : ಮಾಜಿ ಮಂತ್ರಿ ಅಲ್ಕೋಡ ಆರೋಪ

ರಾಣೇಬೆನ್ನೂರು, ನ.22- ಮುಖ್ಯಮಂತ್ರಿ ಸಿದ್ರಾಮಯ್ಯ ಅವರು ಇಂತಹ ಆಡಳಿತ ಕೊಡುತ್ತಾರೆ ಅನ್ನುವುದು ನಮ್ಮ ಕನಸು ಮನಸ್ಸಿನಲ್ಲಿರಲಿಲ್ಲ ಎಂದು ಮಾಜಿ ಸಚಿವ, ಜೆಡಿಎಸ್ ಮುಖಂಡ ಅಲ್ಕೋಡ ಹನುಮಂತಪ್ಪ ಅವರು ಸರ್ಕಾರದ ಆಡಳಿತದ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದರು.



ರಾಣೇಬೆನ್ನೂರು

ಅವರು ಹಾವೇರಿ ಜಿಲ್ಲೆಯಲ್ಲಿ ಬರ ಅಧ್ಯಯನ ನಡೆಸಿ ಇಲ್ಲಿನ ಜೆಡಿಎಸ್ ಕಛೇರಿಯಲ್ಲಿ ಸುದ್ದಿಗೋಷ್ಠಿ ನಡೆಸಿದರು.

ಶೇ. 95 ರಷ್ಟು ಮುಂಗಾರಿ ಹಾಗೂ ಹಿಂಗಾರಿ ಬೆಳೆ ನಾಶವಾಗಿದೆ. ರೈತ ಬಹಳ ಸಂಕಷ್ಟದಲ್ಲಿದ್ದಾನೆ. ಸರ್ಕಾರ ಅವನತ್ತ ಕಣ್ಣು ತೆರದು ನೋಡಿಲ್ಲ. ಪ್ರತಿ ತಾಲ್ಲೂಕಿಗೆ ಬರಗಾಲದ ಪರಿಹಾರ ಬಂದಿದೆ ಎಂದು ಸರ್ಕಾರ ಹೇಳುತ್ತಿದೆ. ಆದರೆ ಯಾವೊಬ್ಬ ರೈತರಿಗೂ ಹಣ ಕೊಟ್ಟಿಲ್ಲ. ಕಾಗದದಲ್ಲಿ ಅದೃಶ ಇರಬಹುದು ಹಣ ಬಂದಿಲ್ಲ. ಸರ್ಕಾರ ಸುಳ್ಳು ಹೇಳುತ್ತಿದೆ ಎಂದು ಹನುಮಂತಪ್ಪ ಆರೋಪಿಸಿದರು.

ಗ್ಯಾರಂಟಿ ಹೆಸರಿನಲ್ಲಿ ಅಭಿವೃದ್ಧಿ ತಡೆದಿರುವ ಸರ್ಕಾರ ತಾವೇ ಹೇಳಿಕೊಂಡಿರುವ ಗ್ಯಾರಂಟಿಗಳನ್ನೂ ಸಹ ಸಮರ್ಪಕವಾಗಿ ಅನುಷ್ಠಾನಕ್ಕೆ ತಂದಿಲ್ಲ. ಉಚಿತ ಬಸ್ ಸಂಚಾರ ಬಿಟ್ಟರೆ, ಕರೆಂಟ್, ಯಜಮಾನಿಗೆ ಎರಡು ಸಾವಿರ ಹಾಗೂ ಯುವಕರಿಗೆ ಭತ್ಯೆ ಯಾವುದೂ ಇಲ್ಲ. ಕೇವಲ ಸುಳ್ಳು ಹೇಳುತ್ತಾ ಸರ್ಕಾರ ನಡೆಸುತ್ತಿದ್ದಾರೆ. ಜನರ ಈ ಎಲ್ಲಾ ಸಮಸ್ಯೆಗಳ ಬಗ್ಗೆ ಮಾಜಿ ಪ್ರಧಾನಿ ದೇವೇಗೌಡರು, ಕುಮಾರಸ್ವಾಮಿ ಅವರು ಲೋಕಸಭೆ ಹಾಗೂ ವಿಧಾನಸಭೆಯಲ್ಲಿ ಹೋರಾಟ ಮಾಡಿದರೆ, ಪಕ್ಷ ಬಹಿರಂಗ ಹೋರಾಟ ಮಾಡುತ್ತದೆ ಎಂದು ಮಾಜಿ ಸಚಿವ ಹನುಮಂತಪ್ಪ ಹೇಳಿದರು.

ಮುಖಂಡರಾದ ಮಂಜುನಾಥ ಗೌಡಶಿವಣ್ಣನವರ ಹಾಗೂ ವೀರಭದ್ರಪ್ಪ ಹಾಲರಬಿ ಜೊತೆಗಿದ್ದರು.

# ಆತ್ಮವಿಶ್ವಾಸದ ಕೊರತೆ ಆತ್ಮಹತ್ಯೆಗೆ ಕಾರಣ

## ಹರಿಹರದ ಎಸ್‌ಜೆವಿಪಿ ಕಾಲೇಜು ಕಾರ್ಯಕ್ರಮದಲ್ಲಿ ಪದ್ಮಶ್ರೀ ಜೋಗತಿ ಬಿ.ಮಂಜಮ್ಮ

ಹರಿಹರ, ನ.22- ಆತ್ಮವಿಶ್ವಾಸದ ಕೊರತೆಯೇ ಆತ್ಮಹತ್ಯೆಗೆ ಕಾರಣವಾಗಿದೆ. ವಿದ್ಯಾರ್ಥಿಗಳು ತಮ್ಮ ಜೀವನದಲ್ಲಿ ಎಂತಹದೇ ಕಠಿಣವಾದ ಪರಿಸ್ಥಿತಿ ಎದುರಾದರೂ ಧೈರ್ಯದಿಂದ ಮುನ್ನುಗ್ಗಿ, ಗುರಿ ಮುಟ್ಟಿ, ಯಶಸ್ಸು ಗಳಿಸುವಂತೆ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರು ಹಾಗು ಕರ್ನಾಟಕ ಜಾನಪದ ಅಕಾಡೆಮಿ ನಿಕಟ ಪೂರ್ವ ಅಧ್ಯಕ್ಷರಾದ ಜೋಗತಿ ಮಂಜಮ್ಮ ಕರೆ ನೀಡಿದರು.



ನಗರದ ಎಸ್.ಜೆ.ವಿ.ಪಿ ಕಾಲೇಜು ಮತ್ತು ಸ್ಫೂರ್ತಿ ಪ್ರಕಾಶನ ಸಂಸ್ಥೆಯ ಸಹಯೋಗ ದೊಂದಿಗೆ ಶ್ರೀಶೈಲ ಜಗದ್ಗುರುಗಳವರ 51ನೇ ಜನ್ಮದಿನ ಮತ್ತು ಕರ್ನಾಟಕ ರಾಜ್ಯೋತ್ಸವ ಅಂಗವಾಗಿ ನಡೆದ ಮಹಿಳಾ ಗೋಷ್ಠಿಯಲ್ಲಿ ವಿಶೇಷ ಉಪನ್ಯಾಸಕರಾಗಿ ಆಗಮಿಸಿ ಅವರು ಮಾತನಾಡಿದರು

ಇತ್ತೀಚಿನ ದಿನಗಳಲ್ಲಿ ಕೆಲವು ವಿದ್ಯಾರ್ಥಿಗಳು ಸಣ್ಣ ಸಣ್ಣ ವಿಚಾರಗಳಿಗೆ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದು ಕಳವಳಕಾರಿಯಾಗಿದ್ದು, ಇದಕ್ಕೆಲ್ಲ ಕಾರಣ ಆತ್ಮವಿಶ್ವಾಸದ ಕೊರತೆ ಎಂದು ತಿಳಿಸಿದರು. ನಾನು ಜೀವನದಲ್ಲಿ ಅನೇಕ ಬಾರಿ ಅಪಮಾನ, ನಿಂದನೆಗಳನ್ನು ಅನುಭವಿಸಿದ್ದೇನೆ. ಅಂದು ನಾನು ಅವುಗಳನ್ನು ಸಹಿಸಿಕೊಳ್ಳದೇ ಒಂದು ಬಾರಿ ಆತ್ಮಹತ್ಯೆ ಮಾಡಿಕೊಳ್ಳಲು ಯೋಚನೆ ಮಾಡಿದ್ದುಂಟು ಆದರೆ ನನ್ನ ಸುಪ್ತ ಮನಸ್ಸಿನಲ್ಲಿ ಇದ್ದ ಧೈರ್ಯ ಮತ್ತು ಆತ್ಮವಿಶ್ವಾಸದ ಫಲವಾಗಿ ಇಂದು ಬದುಕಿ ಬಾಳಿ ದೇಶದ ಅತ್ಯುನ್ನತ ಪ್ರಶಸ್ತಿಯಾದ ಪದ್ಮಶ್ರೀ ಪ್ರಶಸ್ತಿ ಪಡೆದಿದ್ದೇನೆ ಎಂದು ಭಾವುಕವಾಗಿ ನುಡಿದರು.

ಇಂದಿನ ಯುವ ಜನತೆ ಸಂಸ್ಕಾರದ ಜೀವನವನ್ನು ನಡಸಬೇಕು. ತಂದೆ-ತಾಯಿ ಮತ್ತು ಗುರುವಿಗೆ ಸದಾಕಾಲವೂ ಚಿರರುಣಿಯಾಗಿರಬೇಕು ಎಂದು ತಿಳಿಸಿ ಮಾನವೀಯತೆ ಮತ್ತು ಸಮಾನತೆಯನ್ನು ಪ್ರೋತ್ಸಾಹಿಸಬೇಕೆಂದು ಕರೆ ನೀಡಿದರು.

ಕಾರ್ಯಕ್ರಮವನ್ನು ಉದ್ಘಾಟಿಸಿದ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಅಧಿಕಾರಿ ಗಣಪತಿ ಮಾಳಂಜಿ ಮಾತನಾಡಿ, ಹೆಣ್ಣು ಸಂಸಾರದ ಕಣ್ಣು ಎನ್ನುವಂತೆ ಸಮಾಜದಲ್ಲಿ ಇಂದು ಎಲ್ಲಾ ರಂಗಗಳಲ್ಲಿ ಪುರುಷರಿಗೆ ಸಮಾನವಾಗಿ ಬೆಳೆಯುತ್ತಿರುವುದು ಸಂತೋಷದ ಸಂಗತಿ ಎಂದು ತಿಳಿಸಿದರು.

ವೇದಿಕೆಯಲ್ಲಿ ಸಂಸ್ಥೆಯ ಕಾರ್ಯದರ್ಶಿ ಆರ್.ಟಿ ಪ್ರಶಾಂತ್ ದುಗ್ಗತ್ತಿಮಠ್, ನಗರಸಭೆ ಸದಸ್ಯರಾದ ಶ್ರೀಮತಿ ಅಶ್ವಿನಿ ಕೃಷ್ಣ, ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖಾಧಿಕಾರಿ ಶ್ರೀಮತಿ ಗಾಯತ್ರಿ, ಸ್ಫೂರ್ತಿ ಪ್ರಕಾಶನದ ಅಧ್ಯಕ್ಷ ಬಸವರಾಜ್.ಎಂ, ತೆಲಗಿ ವೀರಭದ್ರಪ್ಪ, ಮಲ್ಲಮ್ಮ ನಾಗರಾಜ್, ಶಾರದಮ್ಮ ಗುರುದೇವ್, ವೀರಣ್ಣ ಶೆಟ್ಟರ್ ಮತ್ತು ಇತರರು ಭಾಗವಹಿಸಿದ್ದರು.

ಪ್ರಾಚಾರ್ಯರಾದ ಡಾ.ಶಿವಗಂಗಮ್ಮ ಪ್ರಾಸ್ತಾವಿಕ ವಾಗಿ ಮಾತನಾಡಿದರು. ಶ್ರೀಮತಿ ರಶ್ಮಿ ಸ್ವಾಗತಿಸಿದರು. ವಿಶಾಲ್ ಬೆಂಚಳ್ಳಿ ವಂದಿಸಿದರು. ಕು. ನಳಿನಿ ಕಾರ್ಯಕ್ರಮದ ನಿರೂಪಣೆ ಮಾಡಿದರು.

# ನಗರದ ಆರ್.ವಿ.ಜಿ.ಕೆ. ಶಾಲೆಯಲ್ಲಿ ಕನ್ನಡ ರಾಜ್ಯೋತ್ಸವ



ದಾವಣಗೆರೆ, ನ. 22- ದೇವರಾಜ ಅರಸು ಬಡಾವಣೆಯಲ್ಲಿರುವ ಎಸ್.ಕೆ.ಪಿ. ವಿದ್ಯಾಪೀಠದ ಅಡಿಯಲ್ಲಿ ನಡೆಯುತ್ತಿರುವ ಆರ್.ವಿ.ಜಿ.ಕೆ. ಕನ್ನಡ ಮಾಧ್ಯಮ ಪ್ರೌಢಶಾಲೆ ಮತ್ತು ವಾಸವಿ ನರ್ಸರಿ ಹಿರಿಯ ಪ್ರಾಥಮಿಕ ಶಾಲೆಗಳ ಸಂಯುಕ್ತಾಶ್ರಯದಲ್ಲಿ ಕನ್ನಡ ರಾಜ್ಯೋತ್ಸವದ ಅಂಗವಾಗಿ ಕನ್ನಡ ನಾಡಿನ ಸಂಸ್ಕೃತಿಯನ್ನು ಬಿಂಬಿಸುವ ಸಾಂಪ್ರದಾಯಿಕ ವೇಷಭೂಷಣ ತೊಟ್ಟ ವಿದ್ಯಾರ್ಥಿಗಳು ಕನ್ನಡ ನುಡಿ ಜಾಥಾದಲ್ಲಿ ಭಾಗವಹಿಸಿದ್ದರು.

ಜಾಥಾಗೆ ಚಾಲನೆಯನ್ನು ದಾವಣಗೆರೆ ಉತ್ತರ ವಲಯ ಕ್ಷೇತ್ರ ಶಿಕ್ಷಣಾಧಿಕಾರಿ ಷೇರ್ ಅಲಿ ಮತ್ತು ತಾಲ್ಲೂಕು ದೈಹಿಕ ಶಿಕ್ಷಣಾಧಿಕಾರಿಗಳು, ಆಡಳಿತಾಧಿಕಾರಿ ಡಾ. ಕುಮಾರ್, ಮುಖ್ಯ ಶಿಕ್ಷಕರಾದ ಕೆ.ಸಿ. ನಿರಂಜನ್, ಕೊಟ್ರೇಶ್ ಮತ್ತು ಇತರರು ಭಾಗವಹಿಸಿದ್ದರು.

# ಸಮಾಜದಲ್ಲಿ ಶ್ರೇಷ್ಠ ವ್ಯಕ್ತಿಯಾಗಲು ಉತ್ಕೃಷ್ಟ ಧಾರ್ಮಿಕ ಮೌಲ್ಯಗಳನ್ನು ಅನುಸರಿಸಬೇಕು

## ಸಾಲಕಟ್ಟೆ ಗ್ರಾಮದಲ್ಲಿ ಲಿಂಗದಹಳ್ಳಿ ವೀರಭದ್ರ ಶ್ರೀಗಳ ಅಭಿಪ್ರಾಯ



ಹರಿಹರ, ನ.22- ಸಮಾಜದಲ್ಲಿ ಶ್ರೇಷ್ಠ ವ್ಯಕ್ತಿಯಾಗಿ ಬೆಳೆಯಬೇಕೆಂದರೆ ಉತ್ತಮ ಸಾಮಾಜಿಕ, ಕೌಟುಂಬಿಕ ಜೀವನದ ಜೊತೆಗೆ, ಉತ್ಕೃಷ್ಟ ಧಾರ್ಮಿಕ ಮೌಲ್ಯಗಳನ್ನು ಅನುಸರಿಸಬೇಕು ಎಂದು ಲಿಂಗದಹಳ್ಳಿ ಶ್ರೀ ವೀರಭದ್ರ ಶಿವಾಚಾರ್ಯ ಸ್ವಾಮಿಗಳು ಅಭಿಪ್ರಾಯ ಪಟ್ಟರು.

ಅವರಿಂದು ತಾಲ್ಲೂಕಿನ ಸಾಲಕಟ್ಟೆ ಗ್ರಾಮದ ಶ್ರೀ ಈಶ್ವರ ಮತ್ತು ಶ್ರೀ ಕರಿಯಮ್ಮದೇವಿ ದೇವಸ್ಥಾನಗಳ ಕಳಸಾರೋಹಣ ನೆರವೇರಿಸಿ, ಜನ ಜಾಗೃತಿ ಧರ್ಮ ಸಮಾರಂಭವನ್ನು ಉದ್ದೇಶಿಸಿ ಆಶೀರ್ವಚನ ನೀಡುತ್ತಿದ್ದರು.

ಧರ್ಮ ಒಂದು ಕಿಟಕಿ ಇದ್ದಂತೆ. ಕಿಟಕಿ ತೆರೆದರೆ ತಂಪಾದ ಗಾಳಿ ಬೆಳಕು ಎಲ್ಲಡೆ ಆವರಿಸುತ್ತದೆ. ಇಲ್ಲದಿದ್ದರೆ ಕತ್ತಲು ಆವರಿಸುತ್ತದೆ. ದೇವಾಲಯಗಳು ಸಂಸ್ಕೃತಿಯ ಕೇಂದ್ರಗಳಾಗಿದ್ದು, ಭಾರತೀಯರು ದೇಹಕ್ಕಿಂತ ದೇವಾಲಯಗಳಿಗೆ ಹೆಚ್ಚಿನ ಪ್ರಾಮುಖ್ಯತೆ ಕೊಟ್ಟವರಾಗಿದ್ದಾರೆ. ದೇವರಲ್ಲಿರುವ ತಾಳ್ಮೆ, ಸಹನಾ ಗುಣ ಮನುಷ್ಯರಲ್ಲಿ ಬೆಳೆಯಬೇಕಾಗಿದೆ. ಆಗ ಮಾತ್ರ ಸಂಸ್ಕಾರಯುತ, ಸುಸಜ್ಜಿತ ಸಮಾಜ ನಿರ್ಮಾಣ ಸಾಧ್ಯವಾಗುತ್ತದೆ. ಭಗವಂತನನ್ನು ಅರಿತಾಗ ಮಾತ್ರ ಅರಿವಿನ ಜ್ಞಾನ ಉಂಟಾಗುತ್ತದೆ. ನಿತ್ಯ ದೇವರ ಸ್ಮರಣೆಯಿಂದ ಮಾತ್ರ ಅರಿವಿನ ಜ್ಞಾನ ತೆರೆದುಕೊಳ್ಳುತ್ತದೆ ಎಂದು ತಿಳಿಸಿದರು.

ಮಾಜಿ ಶಾಸಕ ಹೆಚ್.ಎಸ್.ಶಿವಶಂಕರ್ ಮಾತನಾಡಿ, ಮಕ್ಕಳ ಭವಿಷ್ಯ ಪೋಷಕರ ಕೈಯಲ್ಲಿದ್ದು, ಅವರನ್ನು ಜಾಗರೂಕತೆಯಿಂದ ಲಾಲನೆ, ಪಾಲನೆ, ಪೋಷಣೆ ಮಾಡಬೇಕಿದೆ. ಮೊಬೈಲ್, ಕಂಪ್ಯೂಟರ್‌ಗಳಿಂದಾಗಿ ಜನರು ಸಂಸ್ಕಾರ, ಸಂಸ್ಕೃತಿಗಳನ್ನು ಮರೆಯುತ್ತಿದ್ದಾರೆ. ಇಂದಿನ ಮಕ್ಕಳಿಗೆ ಸಂಸ್ಕಾರದ ಬಗ್ಗೆ ಪಾಠ ಮಾಡಬೇಕಾಗಿದೆ. ಗುರು - ಹಿರಿಯರ ಬಗ್ಗೆ ಗೌರವ ಕಡಿಮೆಯಾಗುತ್ತಿದೆ. ಆಧುನಿಕ ಯುಗದಲ್ಲಿ ನಮ್ಮ ಧರ್ಮ, ಸಂಸ್ಕಾರಕ್ಕೆ ಧಕ್ಕೆಯಾಗದಂತೆ ನಡೆದುಕೊಳ್ಳಬೇಕಿದೆ. ಪೋಷಕರು ತಮ್ಮ ಮಕ್ಕಳಿಗೆ ಈ ಬಗ್ಗೆ ತಿಳಿ ಹೇಳಬೇಕಾದ ಅಗತ್ಯವಿದೆ ಎಂದು ತಿಳಿಸಿದರು.

ಮುಖ್ಯ ಅತಿಥಿ ಮಾಜಿ ಶಾಸಕ ಎಸ್.ರಾಮಪ್ಪ, ಬಿಜೆಪಿ ಯುವ ಮುಖಂಡ ಚಂದ್ರಶೇಖರ್ ಪೂಜಾರ್ ಮಾತನಾಡಿದರು.

ಧರ್ಮಸ್ಥಳ ಯೋಜನಾಧಿಕಾರಿ ವಸಂತ ದೇವಾಡಿಗ, ವಲಯ ಯೋಜನಾಧಿಕಾರಿ ಮಾರುತಿ, ಗ್ರಾಮದ ಪ್ರಮುಖ ರಾದ ಡಿ.ಎಂ. ಹಾಲಸ್ವಾಮಿ, ಕೆ.ಯೋಗಪ್ಪ, ಪಟೇಲ್ ವೇದಮೂರ್ತಪ್ಪ, ಟಿ.ಹುಚ್ಚೆಂಗೆಪ್ಪ, ಎಸ್.ಜಿ. ರಾಜಶೇಖರಪ್ಪ, ಜಿ.ಎಲ್.ರಾಜಶೇಖರಪ್ಪ, ಎಂ.ಗುರುನಾಥ್, ಬಣಕಾರ್ ವೀರೇಶಪ್ಪ, ಬಿ. ರೇವಣಸಿದ್ದಪ್ಪ, ಎಂ.ಜಿ.ರಾಜಶೇಖರಪ್ಪ, ಆಂಧ್ರದ ರಾಜಪ್ಪ, ನಿವೃತ್ತ ಶಿಕ್ಷಕರಾದ ಎಂ.ಜಿ.ಚಿಕ್ಕಪ್ಪ, ದೇವರಬೆಳಕೆರೆ ರುದ್ರಪ್ಪ, ದೇವಸ್ಥಾನ ಸಮಿತಿಯ ಎಸ್.ಜಿ.ಪ್ರಭುಗೌಡ, ಎಂ.ನಿಜಗುಣ, ಎಸ್.ಜಿ. ಮಂಜುನಾಥ, ಎಸ್.ಪಿ.ಕುಬೇಂದ್ರಪ್ಪ, ಟಿ.ಎಸ್. ಹನುಮಂತಪ್ಪ ಇತರರು ಉಪಸ್ಥಿತರಿದ್ದರು.

ವನಜಾ ಮತ್ತು ಸಂಗಡಿಗರು ಪ್ರಾರ್ಥಿಸಿದರೆ, ಶಿಕ್ಷಕರಾದ ಡಿ.ಎಂ.ಮಂಜುನಾಥಯ್ಯ ಸ್ವಾಗತಿಸಿ, ಆರ್.ಬಿ.ಮಲ್ಲಿಕಾರ್ಜುನ ವಂದಿಸಿದರು. ಕಾರ್ಯಕ್ರಮವನ್ನು ಶಿಕ್ಷಕರಾದ ಕೆ.ಆರ್. ಮಂಜುನಾಥ ನಿರೂಪಿಸಿದರು.

# ಹರಿಹರ ಗ್ರಾಮಾಂತರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಚಿಂತಾಮಣಿ ನಗರ, ಹಳೆಹರ್ಲಾಪುರ, ವಾಟರ್ ವರ್ಕ್ಸ್, ಅಮರಾವತಿ ಕಾಲೋನಿ, ಮಜ್ಜಿಗೆ ಲೇಔಟ್, ಆಶ್ರಯ ಕಾಲೋನಿ, ವಿಜಯನಗರ, ಕೆ.ಆರ್. ನಗರ, ಹೊಸ ಹರ್ಲಾಪುರ, ಬಸ್ ಡಿಪೋ ರಸ್ತೆ, ಕಿರ್ಲೋಸ್ಕರ್ ಕಾಲೋನಿ, ಹಳೆ ಪಿ.ಬಿ. ರಸ್ತೆ, ಭರಂಪುರ, ಕೆಐಎಡಿಬಿ, ಇಂಡಸ್ಟ್ರಿಯಲ್ ಏರಿಯಾ, ಕೆಎಚ್‌ಬಿ ಕಾಲೋನಿ, ಅಮರಾವತಿ ಗ್ರಾಮ, ಆಂಜನೇಯ ಬಡಾವಣೆ, ಪೊಲೀಸ್ ಕ್ವಾರ್ಟರ್ಸ್, ಕೇಶವ್‌ನಗರ, ರೈಲ್ವೆ ಸ್ಟೇಷನ್, ಬಸ್‌ಸ್ಟ್ಯಾಂಡ್, ಪಿ.ಬಿ. ರೋಡ್, ಟಿಪ್ಪು ನಗರ, ಪಟೇಲ್ ಬಡಾವಣೆ ಮತ್ತು ಗ್ರಾಮೀಣ ಪ್ರದೇಶಗಳಾದ ದೊಗ್ಗಳ್ಳಿ, ಗಂಗನರಸಿ, ಗಂಗನರಸಿ ಕ್ಯಾಂಪ್, ಗುತ್ತೂರು ಐಪಿ ವಲಯ, ದೀಟೂರು, ಪಾಮೇನಹಳ್ಳಿ, ಕರಲಹಳ್ಳಿ ಮಠ ಮತ್ತು ಸುತ್ತಮುತ್ತಲಿನ ಪ್ರದೇಶಗಳಿಗೆ ಇಂದು ಬೆಳಿಗ್ಗೆ 10 ರಿಂದ ಸಂಜೆ 5 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

# ಪಂಚಮಸಾಲಿ ಸಮಾಜದಿಂದ ವಿವಿಧ ಸ್ಪರ್ಧೆಗಳು

ದಾವಣಗೆರೆ, ನ.22- ಪಂಚಮಸಾಲಿ ಸಮಾಜದಿಂದ ನಡೆಸುವ ಕನ್ನಡ ರಾಜ್ಯೋತ್ಸವ ಮತ್ತು ಕಿತ್ತೂರು ರಾಣಿ ಚನ್ನಮ್ಮನ ಜಯಂತ್ಯುತ್ಸವದ ನಿಮಿತ್ತ ಸಮಾಜದ ಮಹಿಳೆಯರು ಮತ್ತು ಮಕ್ಕಳಿಗೆ ವಿವಿಧ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ.

ದಿನಾಂಕ 25ರ ಶನಿವಾರ ಸಂಜೆ 6 ಗಂಟೆಯಿಂದ ನಡೆಯಲಿರುವ 'ಕನ್ನಡ ರಾಜ್ಯೋತ್ಸವ' ಹಾಗೂ 'ಕಿತ್ತೂರು ರಾಣಿ ಚನ್ನಮ್ಮನ ಜಯಂತ್ಯೋತ್ಸವ'ಹಾಗೂ 'ಮಕ್ಕಳ ದಿನಾಚರಣೆ' ನಿಮಿತ್ತ ಅದೇ ದಿನ ಮಧ್ಯಾಹ್ನ 3 ಗಂಟೆಗೆ ಸ್ಪರ್ಧೆಗಳು ನಡೆಯಲಿವೆ.

8 ರಿಂದ 10ನೇ ತರಗತಿ ವಿದ್ಯಾರ್ಥಿಗಳಿಗೆ ವೀರ ರಾಣಿ ಕಿತ್ತೂರು ಚನ್ನಮ್ಮನ ಕುರಿತು ಪ್ರಬಂಧ ಸ್ಪರ್ಧೆ. 6 ರಿಂದ 10ನೇ ತರಗತಿ ವಿದ್ಯಾರ್ಥಿಗಳಿಗೆ ಆಶುಭಾಷಣ ಸ್ಪರ್ಧೆ. 1 ರಿಂದ 5ನೇ ತರಗತಿ ವಿದ್ಯಾರ್ಥಿಗಳಿಗೆ ನೆನಪಿನ ಸಾಮರ್ಥ್ಯ ಪರೀಕ್ಷೆ ಹಾಗೂ ಕನ್ನಡ ಶಬ್ದ ಬರಹ ಸ್ಪರ್ಧೆ. ಮಕ್ಕಳು ಮತ್ತು ಮಹಿಳೆಯರಿಗೆ ಮ್ಯೂಜಿಕಲ್ ಚೇರ್ ಸ್ಪರ್ಧೆ ನಡೆಸಲಾಗುತ್ತದೆ.

ಸ್ಪರ್ಧೆಯಲ್ಲಿ ಭಾಗವಹಿಸುವವರು ಶನಿವಾರ ಮಧ್ಯಾಹ್ನ 2 ಗಂಟೆಗೆ ಸಮಾಜದ ಕಛೇರಿಗೆ ಬಂದು ಹೆಸರು ನೋಂದಾಯಿಸಬಹುದು. ಮಾಹಿತಿಗಾಗಿ ಮೊ. 9880335422 (ಕೆ.ಶಿವಕುಮಾರ್), 9448533713 (ಕಾಶಿನಾಥ್), 9242134700 (ಬಸವರಾಜ್) ಇವರನ್ನು ಸಂಪರ್ಕಿಸಬಹುದು.

# ಮದ್ಯಕ್ಕಾಗಿ ಲಂಚ

(1ನೇ ಪುಟದಿಂದ) ಕ್ರಮ ತೆಗೆದುಕೊಳ್ಳಲಾಗಿದೆ ಎಂದು ಡಿ.ಸಿ.ಪಿ. ಸಫೀನ್ ಹಸನ್ ತಿಳಿಸಿದ್ದಾರೆ.

ನಾನಾ ಚಿಲೊಡ ವೃತ್ತದ ಬಳಿ ಉದ್ಯಮಿಯನ್ನು ಪೊಲೀಸರು ತಡೆದು ತಪಾಸಣೆ ನಡೆಸಿದ್ದರು. ಅವರ ಕಾರಿನಲ್ಲಿ ಮದ್ಯದ ಬಾಟಲಿ ಇರುವುದು ಕಂಡು ಬಂದಿತ್ತು. ಗುಜರಾತ್‌ನಲ್ಲಿ ಪಾನ ನಿಷೇಧವಿದೆ. ಈ ಹಿನ್ನೆಲೆಯಲ್ಲಿ ಲಂಚ ಕೊಟ್ಟರೆ ಕ್ರಮ ತೆಗೆದುಕೊಳ್ಳುವುದಿಲ್ಲ ಎಂದು ಪೊಲೀಸರು ಹೇಳಿದ ದೃಶ್ಯ ವಿಡಿಯೋ ಒಂದರಲ್ಲಿ ದಾಖಲಾಗಿತ್ತು. ಅಂತಿಮವಾಗಿ ಮಂಚಂದ ಅವರು ಯು.ಪಿ.ಐ. ಮೂಲಕ ಹಣ ನೀಡಿದ್ದರು. ಪೊಲೀಸರು ತಿಳಿಸಿದಂತೆ ಅವರು ಅರುಣ್ ಹೊಡಿಯೊಲ್ ಎಂಬುವವರಿಗೆ ಹಣ ಕಳಿಸಿದ್ದರು. ಪೊಲೀಸರು ಈಗ ಹಣ ಯುಪಿಐ ಮೂಲಕ ಹಣ ಪಡೆದ ವ್ಯಕ್ತಿಯ ವಿರುದ್ಧವೂ ತನಿಖೆ ಆರಂಭಿಸಿದ್ದಾರೆ.

# ದಿಬ್ಬದಹಳ್ಳಿ : ಸಂಭ್ರಮದ ಕಳಸಾರೋಹಣ, ಶಿಲಾಮೂರ್ತಿಗಳ ಪ್ರತಿಷ್ಠಾಪನೆ






ಮಲೇಬೆನ್ನೂರು, ನ.22- ದಿಬ್ಬದಹಳ್ಳಿ ಗ್ರಾಮದಲ್ಲಿ ಗುಳ್ಳಮ್ಮ, ದುರ್ಗಮ್ಮದೇವಿ ದೇವಸ್ಥಾನಕ್ಕೆ ನೂತನವಾಗಿ ನಿರ್ಮಿಸಿರುವ ಗೋಪುರಕ್ಕೆ ಕಳಸಾರೋಹಣ ಮತ್ತು ಗುಳ್ಳಮ್ಮ, ದುರ್ಗಮ್ಮ ದೇವತೆಗಳ ನೂತನ ಶಿಲಾಮೂರ್ತಿಗಳ ಪ್ರತಿಷ್ಠಾಪನೆ ಬುಧವಾರ ಸಂಭ್ರಮದಿಂದ ಜರುಗಿತು.

ಶಾಸಕ ಬಿ.ಪಿ.ಹರೀಶ್, ಜಿ.ಪಂ. ಮಾಜಿ ಸದಸ್ಯ ಬೆಣ್ಣೆಹಳ್ಳಿ ಹಾಲೇಶಪ್ಪ, ಜಿಲ್ಲಾ ಬಿಜೆಪಿ ಅಧ್ಯಕ್ಷ ಹನಗವಾಡಿ ವೀರೇಶ್, ಎಪಿಎಂಸಿ ಮಾಜಿ ಅಧ್ಯಕ್ಷ ಜಿ.ಮಂಜುನಾಥ್ ಪಟೇಲ್, ತಾ.ಪಂ. ಮಾಜಿ ಅಧ್ಯಕ್ಷ ಐರಣಿ ಅಣ್ಣಪ್ಪ, ಗ್ರಾ.ಪಂ. ಅಧ್ಯಕ್ಷೆ ಲಕ್ಷ್ಮಿದೇವಿ ಮಂಜುನಾಥ್, ಗ್ರಾ.ಪಂ. ಸದಸ್ಯ ಓಂಕಾರಪ್ಪ, ಮಲೇಬೆನ್ನೂರಿನ ತಳಸದ ಬಸವರಾಜ್, ಓ.ಜಿ.ರುದ್ರಗೌಡ್ರು, ಕೆ.ಜಿ.ಪರಮೇಶ್ವರಪ್ಪ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

# ಕುಣಿಬೆಳಕೆರೆಯಲ್ಲಿ ಶ್ರೀ ಬೀರಲಿಂಗೇಶ್ವರ ಸ್ವಾಮಿಯ ದೊಡ್ಡ ಎಡೆ ಮಹೋತ್ಸವ



ಹರಿಹರ ತಾಲ್ಲೂಕಿನ ಕುಣಿಬೆಳಕೆರೆ ಗ್ರಾಮದ ಶ್ರೀ ಬೀರಲಿಂಗೇಶ್ವರ ಸ್ವಾಮಿಯ ದೊಡ್ಡ ಎಡೆ ಮಹೋತ್ಸವದ ಕಾರ್ಯಕ್ರಮಗಳು ನಾಳೆ ರಾತ್ರಿ 8 ಗಂಟೆಗೆ ಸ್ವಾಮಿಗೆ ಹೂವಿನ ಅಲಂಕಾರ, ಡೊಳ್ಳಿನ ಪದಗಳೊಂದಿಗೆ ವಿಶೇಷ ಪೂಜೆ ನೆರವೇರುವುದು.

ನಾಡಿದ್ದು ದಿನಾಂಕ 24ರ ಶುಕ್ರವಾರ ಬೆಳಿಗ್ಗೆ 5 ಗಂಟೆಗೆ ಸ್ವಾಮಿಗೆ ಯಥಾಪ್ರಕಾರ ವಿಶೇಷ ಪೂಜೆ ನಡೆಯಲಿದೆ. ನಂತರ ಬೆಳಿಗ್ಗೆ 9.30 ರಿಂದ ದೇವಸ್ಥಾನದ ಆವರಣದಲ್ಲಿ ಉಚಿತ ಸಾಮೂಹಿಕ ವಿವಾಹವು ಜರುಗುವುವು. ನಂತರ 10-30ಕ್ಕೆ ದೇವಸ್ಥಾನದ ಪೂಜಾರ್ (ಈರಗಾರರು) ಇವರಿಂದ ಶ್ರದ್ಧಾ, ಭಕ್ತಿಯಿಂದ ಸ್ವಾಮಿಗೆ ದೊಡ್ಡಎಡೆಯನ್ನು ಹಾಕಲಾಗುವುದು. ಮಧ್ಯಾಹ್ನ 12 ರಿಂದ ಸ್ವಾಮಿಯ ದೊಡ್ಡಎಡೆಯ ಪ್ರಸಾದವನ್ನು ಸರ್ವ ಭಕ್ತಾದಿಗಳು ಸ್ವೀಕರಿಸಬೇಕೆಂದು ದೇವಸ್ಥಾನದ ಧರ್ಮದರ್ಶಿಗಳು ತಿಳಿಸಿದ್ದಾರೆ.

# ದೇವರಬೆಳಕೆರೆ ವ್ಯಾಪ್ತಿಯಲ್ಲಿ ಇಂದು ವಿದ್ಯುತ್ ವ್ಯತ್ಯಯ

ಹರಿಹರ ತಾಲ್ಲೂಕಿನ ದೇವರಬೆಳಕೆರೆ, ಕಡ್ಲೆಗೊಂದಿ, ಸತ್ಯನಾರಾಯಣ ಕ್ಯಾಂಪ್, ಸಾಲಕಟ್ಟೆ, ಸಾಲಕಟ್ಟೆ ಐಪಿ ವಲಯ ಮತ್ತು ಸುತ್ತಮುತ್ತಲಿನ ಪ್ರದೇಶಗಳಿಗೆ ಇಂದು ಬೆಳಿಗ್ಗೆ 10 ರಿಂದ ಸಂಜೆ 6 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

# ಮರಳು ವಿತರಣೆ ಅವ್ಯವಸ್ಥೆಗೆ ಖಂಡನೆ

ಹೊನ್ನಾಳಿ, ನ.22- ನ್ಯಾಮತಿ-ಹೊನ್ನಾಳಿ ಅವಳಿ ತಾಲ್ಲೂಕಿನಲ್ಲಿ ಮರಳು ಕೇವಲ ಕಾಂಗ್ರೆಸ್ ಕಾರ್ಯಕರ್ತರಿಗೆ ಹಾಗೂ ಬೆಂಬಲರಿಗೆ ಮಾತ್ರ ದೊರೆಯು ವಂತಾಗಿದ್ದು, ಇದು ಮುಂದುವರೆದರೆ ಸಾರ್ವ ಜನಿಕರ ಹಿತದೃಷ್ಟಿಯಿಂದ ಹೋರಾಟದ ಹಾದಿ ಹಿಡಿಯಬೇಕಾ ಗುತ್ತದೆ ಎಂದು ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ ಎಚ್ಚರಿಸಿದರು.



ತಮ್ಮ ನಿವಾಸದಲ್ಲಿ ನಿನ್ನೆ ಕರೆದಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾ ಡಿದ ಅವರು, ಮರಳು ಪಕ್ಷಾತೀತವಾಗಿ ಹಾಗೂ ಎಲ್ಲಾ ಸಾಮಾನ್ಯ ಜನರಿಗೆ ದೊರೆಯಬೇಕು. ನನ್ನ ಅಧಿಕಾರವಧಿಯಲ್ಲಿ ಒಂದು ಟ್ರ್ಯಾಕ್ಟರ್ ಮರಳಿಗೆ 5 ಸಾವಿರ ರೂ.ಗೆ ದೊರೆಯುತ್ತಿತ್ತು. ಈಗ ಒಂದು ಟ್ರ್ಯಾಕ್ಟರ್ ಮರಳಿಗೆ 10 ಸಾವಿರ ರೂ. ಕೊಡಬೇಕಾಗಿದೆ. ಬಡವರಿಗೆ ಹಾಗು ಆರ್ಥಿಕವಾಗಿ ಹಿಂದುಳಿದವರು ಮನೆ ಕಟ್ಟಲು ಮರಳು ದೊರೆಯುತ್ತಿಲ್ಲ ಎಂದು ದೂರಿದರು.

ಕಾಂಗ್ರೆಸ್ ಸರ್ಕಾರ ಆಡಳಿತಕ್ಕೆ ಬಂದ ಮೇಲೆ ಹೊನ್ನಾಳಿ ಮತ್ತು ನ್ಯಾಮತಿ ಅವಳಿ ತಾಲೂಕಿನಲ್ಲಿ ಮರಳು ಮಾಫಿಯ ನಡೆಯುತ್ತಿದೆ ಟ್ರ್ಯಾಕ್ಟರ್ ಸಂಖ್ಯೆಗೆ ಅನು ಗುಣವಾಗಿ ಮರಳು ದಂಧೆ ನಡೆಸಿದ್ದಾರೆ ಎಂದ ಅವರು, ಕಾಂಗ್ರೆಸ್‌ನವರ ಟ್ರ್ಯಾಕ್ಟರ್‌ಗಳಾಗಿದ್ದರೆ ಅಧಿಕಾರಿಗಳು ಅವರ ಟ್ರ್ಯಾಕ್ಟರ್ ಸಂಖ್ಯೆಗಳನ್ನು ಗುರ್ತಿಸಿ ಬಿಡುವಂತಹ ಪರಿಸ್ಥಿತಿ ನಿರ್ಮಾಣವಾಗಿದ್ದು, ಮರಳಿನ ಟ್ರ್ಯಾಕ್ಟರ್‌ಗಳ ಸಂಖ್ಯೆಗಳ ಸಂಕೇತದ ಮೂಲಕ ವ್ಯವಹಾರ ನಡೆಯುತ್ತಿದೆ ಎಂದರು.

ನಾನು ಅಧಿಕಾರದಲ್ಲಿದ್ದಾಗ ಬಡವರಿಗೆ ಮುಕ್ತವಾಗಿ ಮರಳು ಸಿಗುತ್ತಿತ್ತು, ಹಾಗೂ ಸರ್ಕಾರಿ ಕಟ್ಟಡಗಳಿಗೂ ಮರಳು ಸಿಗುತ್ತಿತ್ತು, ಆದರೆ ಈಗ ಸರ್ಕಾರಿ ಕಟ್ಟಡಗಳಿಗೆ ಎಂ ಸ್ಯಾಂಡ್ ಮರಳನ್ನು ಬೆರೆಸುವಂತಹ ಸ್ಥಿತಿ ನಿರ್ಮಾಣವಾಗಿದೆ. ಎಲ್ಲಾ ದೂರುಗಳನ್ನು ಕೇಳಿ ನಾನು ಸುಮ್ಮನೆ ಕುಳಿತುಕೊಳ್ಳುವುದಿಲ್ಲ. ಉದ್ಯೋಗ ಖಾತ್ರಿ ಯೋಜನೆಯಲ್ಲಿ ತೋಟಗಾರಿಕೆ ಬೆಳೆಗಳಿಗೆ ನೀಡುವ ಸಹಾಯಧನ ನಿಲ್ಲಿಸಿರುವುದಲ್ಲದೆ ಅನುದಾನ ನೀಡುವುದನ್ನು ನಿಲ್ಲಿಸಿದ್ದಾರೆ ಇದರಿಂದ ಸಣ್ಣ ರೈತರಿಗೆ ತೀವ್ರವಾದ ತೊಂದರೆಯಾಗುತ್ತದೆ ಎಂದು ಹೇಳಿದರು.

ಬಿಜೆಪಿ ತಾಲ್ಲೂಕು ಅಧ್ಯಕ್ಷ ಜೆ.ಕೆ.ಸುರೇಶ್, ಮುಖಂಡರಾದ ಎಂ.ಎಸ್.ಪಾಲಾಕ್ಷಪ್ಪ, ಧರ್ಮಪ್ಪ, ಬೀರಪ್ಪ, ಸಿ.ಆರ್. ಶಿವಾನಂದ್, ದಿಡಗೂರು ಪಾಲಕ್ಷಪ್ಪ, ಪಲ್ಲವಿ ರಾಜು, ಮಹೇಶ್ ಹುಡೇದ್, ಅರಕೇರಿ ನಾಗರಾಜ್, ಕುಮಾರ ಸ್ವಾಮಿ ಇನ್ನಿತರರಿದ್ದರು.

### ಓಸಿ, ಇಸ್ಪೀಟ್ ವ್ಯಾಪಕ

**ಹೊನ್ನಾಳಿ ತಾಲ್ಲೂಕಿನಲ್ಲಿ ಓಸಿ, ಇಸ್ಪೀಟ್ ವ್ಯಾಪಕವಾಗಿ ನಡೆಯುತ್ತಿದ್ದು, ತಕ್ಷಣ ಇದರ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕು.ಇಲ್ಲವಾದಲ್ಲಿ ಈ ವಿಷಯವಾಗಿ ಡಿಜಿ ಬಳಿ ಹೋಗುವೆ.**

**-ಎಂ.ಪಿ. ರೇಣುಕಾಚಾರ್ಯ, ಮಾಜಿ ಸಚಿವರು**

# ಕಾಂತರಾಜು ವರದಿಯ ಸಾಮಾಜಿಕ ನ್ಯಾಯ ನೀಡಲು ರಾಣೇಬೆನ್ನೂರು ಅಹಿಂದ ಒತ್ತಾಯ



ರಾಣೇಬೆನ್ನೂರು, ನ.22- ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ಹೆಚ್. ಕಾಂತರಾಜು ವರದಿ ಪರೀಕ್ಷಿಸಿ, ಸಾಮಾಜಿಕ ನ್ಯಾಯ ನೀಡುವ ಬದ್ದತೆಯೊಂದಿಗೆ ಅಧಿಕಾರ ಹಿಡಿದಿರುವ ರಾಜ್ಯ ಸರ್ಕಾರ ಈ ಕೂಡಲೇ ಕಾರ್ಯೋನ್ಮುಖವಾಗಬೇಕು ಎಂದು ರಾಣೇಬೆನ್ನೂರು ಅಹಿಂದ ಸಂಘಟನೆ ಬೃಹತ್ ಪ್ರತಿಭಟನೆಯೊಂದಿಗೆ ತಹಶೀಲ್ದಾರ್ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿದೆ.

ಅನೇಕ ಹಿಂದುಳಿದ ವರ್ಗಗಳ ಆಯೋಗಗಳು ವೈಜ್ಞಾನಿಕ ಅಧ್ಯಯನಗಳನ್ನು ನಡೆಸಿ, ಮೀಸಲಾತಿಯನ್ನು ಅಚ್ಚುಕಟ್ಟಾಗಿ ಜಾರಿ ಮಾಡಿದ್ದರೂ ಕೂಡ ರಾಜಕೀಯ ತೀರ್ಮಾನಗಳಿಂದ ಶೋಷಿತರ ಪಾಲು ಬಲಾಢ್ಯರಿಗೆ ಹಂಚಿಹೋಗು ತ್ತಿವೆ. ಕಾರಣ ಭಾರತದ ಸಂವಿಧಾನದ ಆಶಯ ಗಳಂತೆ ಅವಕಾಶ ವಂಚಿತರಿಗೆ ಅನ್ಯಾ ಯವಾಗುತ್ತಿರುವ ಬಗ್ಗೆ ಅಹಿಂದ ಅಸಮಾಧಾನ ವ್ಯಕ್ತಪಡಿಸಿದೆ.

ಎರಡು ದಶಕಗಳಿಂದ ಮೀಸಲಾತಿಯಲ್ಲಿ ಅನೇಕ ಆದೇಶಗಳು ಆಗುತ್ತಾ ಬಂದಿದ್ದು, ಆ ಎಲ್ಲಾ ವಿಷಯಗಳನ್ನು ಪರಿಶೀಲಿಸಿ ಸಾಮಾಜಿಕ ನ್ಯಾಯದ ಸೂತ್ರದಂತೆ ಅಸಮತೋಲನದ ಅನ್ಯಾಯಗಳನ್ನು ತಪ್ಪಿಸಲು ಹೆಚ್. ಕಾಂತರಾಜು ವರದಿಯನ್ನು ಜಾರಿಗೊಳಿಸುವಂತೆ ಮನವಿಯಲ್ಲಿ ಸರ್ಕಾರಕ್ಕೆ ಒತ್ತಾಯಿಸಲಾಗಿದೆ.

ಕುರುಬರ ಸಂಘದ ಅಧ್ಯಕ್ಷ ಷಣ್ಮುಖಪ್ಪ ಕಂಬಳಿ, ರೈತ ಮುಖಂಡ ಹನುಮಂತಪ್ಪ ಕಬ್ಬಾರ, ನಗರಸಭೆ ಸದಸ್ಯ ರಮೇಶ್ ಕರಡೇರ, ಕಿರಣ ಗೂಳೇರ, ಪ್ರವೀಣ ಸಣ್ಣ ನೀಲಪ್ಪನವರ್, ರಮೇಶ ಐರಣಿ, ನಾಗರಾಜ್ ಐರಣಿ, ಮೃತ್ಯುಂಜಯ ಗುದಿಗೇರ ಮತ್ತಿತರರಿದ್ದರು.

# ನಗರದಲ್ಲಿ ಇಂದು ರಾಜ್ಯೋತ್ಸವ

ರಿಯಲ್ ಎಸ್ಟೇಟ್ ಸ್ನೇಹಿತರ ಬಳಗದಿಂದ ಇಂದು ಬೆಳಿಗೆ 10 ಗಂಟೆಗೆ ಎಸ್.ಎಸ್. ಬಡಾವಣೆ ಎ ಬ್ಲಾಕ್, ನಿಜಲಿಂಗಪ್ಪ ಬಡಾವಣೆಯ ಶಾರದಾಂಬ ವೃತ್ತದಲ್ಲಿ ಧ್ವಜಾರೋಹಣ ಮಾಡುವುದರ ಮೂಲಕ ಕರ್ನಾಟಕ ರಾಜ್ಯೋತ್ಸವವನ್ನು ಆಚರಿಸಲಾಗುವುದು.

ಸಂಜೆ 6 ಗಂಟೆಗೆ ಭಾರತಿ ಆರ್ಕೆಸ್ಟ್ರಾ ವತಿಯಿಂದ ರಸಮಂಜರಿ ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದು ಸಮಿತಿಯ ಏಕಾಂತಪ್ಪ ತಿಳಿಸಿದ್ದಾರೆ.

# ಲಕ್ಕಮುತ್ತೇನಹಳ್ಳಿ ಬಳಿಯ ರಸ್ತೆ ಅಪಘಾತದಲ್ಲಿ ಇಬ್ಬರ ಸಾವು

ದಾವಣಗೆರೆ, ನ.22- ಬೈಕ್‌ಗೆ ಬಸ್ ಡಿಕ್ಕಿಯಾಗಿ ಇಬ್ಬರು ಯುವಕರು ಮೃತಪಟ್ಟ ಘಟನೆ ಲಕ್ಕಮುತ್ತೇನಹಳ್ಳಿ ಸಮೀಪದ ಎನ್.ಹೆಚ್.48 ರಸ್ತೆ ಪಕ್ಕದ ಸರ್ವಿಸ್ ರಸ್ತೆಯಲ್ಲಿ ಭಾನುವಾರ ಸಂಜೆ ನಡೆದಿದೆ.

ಕಂದನಕೋವಿ ಗ್ರಾಮದ ಮನು (26) ಹಾಗೂ ಅಣ್ಣೇಶಿ (26) ಮೃತಪಟ್ಟ ಯುವಕರು. ಇವರಿಬ್ಬರೂ ಪಲ್ಸರ್ ಬೈಕ್‌ನಲ್ಲಿ ಅಡಿಕೆ ಕೆಲಸಕ್ಕೆಂದು ಅಂದು ಬೆಳಿಗ್ಗೆ ಭರಮಸಾಗರಕ್ಕೆ ಹೋಗಿ ಸಂಜೆ ವಾಪಸ್ ಮರಳುವಾಗ ಈ ಘಟನೆ ನಡೆದಿದೆ.

ಮನು ಸ್ಥಳದಲ್ಲಿಯೇ ಮೃತಪಟ್ಟರೆ, ಅಣ್ಣೇಶಿ ಆಸ್ಪತ್ರೆಯಲ್ಲಿ ಮೃತಪ ಟ್ಟಿದ್ದಾರೆ. ಬಸ್‌ನಲ್ಲಿದ್ದ ಹತ್ತು ಜನರಿಗೆ ಗಾಯಗಳಾಗಿವೆ. ಈ ಕುರಿತು ಕೆ.ಎಂ. ಮಂಜುನಾಥ್ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

# ಮಲೇಬೆನ್ನೂರು : ಟ್ರೈಲರ್ ಪಲ್ಟಿ - ಸಾವು

ದಾವಣಗೆರೆ, ನ.22- ಜಮೀನಿನಲ್ಲಿ ಜೋಳದ ತೆನೆ ಹೇರಿಕೊಂಡು ಹೋಗುತ್ತಿದ್ದಾಗ ಟ್ರ್ಯಾಕ್ಟರ್ ಟ್ರೈಲರ್ ಪಲ್ಟಿಯಾಗಿ ಹರಿಹರ ತಾಲ್ಲೂಕು ಮಲೇಬೆನ್ನೂರು ಪಟ್ಟಣದ ಹೈದರ್ ಖಾನ್ ಎಂಬಾತ ಮೃತಪಟ್ಟ ಘಟನೆ ಸೋಮವಾರ ಮಲೇಬೆನ್ನೂರಿಲ್ಲಿ ನಡೆದಿದೆ. ಮಲೇಬೆನ್ನೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

KA/SK/CTA-275/2021-2023. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

# ಮತ್ತೆ ಓಪನ್ ಎಐಗೆ ಮರಳಿದ ಆಲ್ಟ್‌ಮ್ಯಾನ್

ಸ್ಯಾನ್ ಫ್ರಾನ್ಸಿಸ್ಕೋ, ನ. 22 - ಕಳೆದ ವಾರವಷ್ಟೇ ಚಾಟ್ ಜಿಪಿಟಿ ಸೇವೆ ಒದಗಿಸುವ ಕಂಪನಿಯಾದ ಓಪನ್ ಎಐನಿಂದ ಹೊರ ಬಿದ್ದಿದ್ದ ಸ್ಯಾಮ್ ಆಲ್ಟ್‌ಮ್ಯಾನ್, ಮತ್ತೆ ಕಂಪನಿಗೆ ವಾಪಸ್ಸಾಗಿದ್ದಾರೆ. ಆಲ್ಟ್‌ಮ್ಯಾನ್ ಅವರನ್ನು ಕಂಪನಿಯಿಂದ ಹೊರ ಹಾಕಿದ್ದು ಉದ್ಯಮಕ್ಕೆ ಆಘಾತ ತಂದಿತ್ತು.

ಸ್ಯಾನ್ ಫ್ರಾನ್ಸಿಸ್ಕೋ ಮೂಲಕ ಓಪನ್ ಎಐ ಹೇಳಿಕೆಯೊಂದನ್ನು ಬಿಡುಗಡೆ ಮಾಡಿದ್ದು, ಸ್ಯಾಮ್ ಆಲ್ಟ್‌ಮ್ಯಾನ್ ಅವರು ಕಂಪನಿಗೆ ಮರಳಲು ವ್ಯವಸ್ಥೆ ಮಾಡಲಾಗಿದೆ. ಅವರು ಹೊಸ ಮಂಡಳಿಯೊಂದಿಗೆ ಸಿಇಒ ಆಗಲಿದ್ದಾರೆ ಎಂದು ತಿಳಿಸಿದೆ.

ಕಳೆದ ಶುಕ್ರವಾರ ಆಲ್ಟ್‌ಮ್ಯಾನ್ ಅವರನ್ನು ಕಂಪನಿಯಿಂದ ಹೊರ ಹಾಕಲಾಗಿತ್ತು. ನಂತರ ಅವರು ಮೈಕ್ರೋಸಾಫ್ಟ್ ಜೊತೆ ಕೈ ಜೋಡಿಸಿದ್ದರು.

ನಂತರ ಓಪನ್ ಎಐನ ಇನ್ನೋರ್ವ ಸಹ ಸ್ಥಾಪಕ ಗ್ರೆಗ್ ಪ್ರಾಕ್‌ಮ್ಯಾನ್ ಕಂಪನಿ ತೊರೆದಿದ್ದರು. ನಾವೂ ಕಂಪನಿ ಬಿಡುತ್ತೇವೆ ಎಂದು 770 ಉದ್ಯೋಗಿಗಳು ಪತ್ರ ಬರೆದಿದ್ದರು.

ಈ ಬೆಳವಣಿಗೆ ಹಿನ್ನೆಲೆಯಲ್ಲಿ ಆಲ್ಟ್‌ಮ್ಯಾನ್ ಹೊರ ಹೋಗಲು ಕಾರಣವಾಗಿದ್ದ ಇನ್ನೋರ್ವ ಓಪನ್ ಎಐ ಸಹ ಸ್ಥಾಪಕ ಇಲ್ಯಾ ಅವರು ಅವರು ವಿಷಾದ ವ್ಯಕ್ತಪಡಿಸಿದ್ದರು.

ಆಲ್ಟ್‌ಮ್ಯಾನ್ ಹಾಗೂ ಬ್ರಾಕ್‌ಮ್ಯಾನ್ ನಿರ್ಗಮನದ ನಂತರ, ಓಪನ್ ಎಐನಿಂದ ಯಾರೇ ಹೊರ ಬಂದರೂ ತನ್ನ ಕಂಪನಿಗೆ ಸೇರಿಸಿಕೊಳ್ಳಲಾಗುವುದು ಎಂದು ಮೈಕ್ರೋಸಾಫ್ಟ್ ತಿಳಿಸಿತ್ತು.

ಆಲ್ಟ್‌ಮ್ಯಾನ್ ಅವರು ಒಂದು ವೇಳೆ ಓಪನ್ ಎಐಗೆ ಮರಳಿದರೆ ಅದಕ್ಕೂ ಬೆಂಬಲ ನೀಡುವುದಾಗಿ ಮೈಕ್ರೋಸಾಫ್ಟ್‌ನ ಮುಖ್ಯಸ್ಥ ಸತ್ಯ ನಡೆಲ್ಲಾ ಹೇಳಿದ್ದರು.

ನಂತರ ಹೇಳಿಕೆಯೊಂದನ್ನು ನೀಡಿದ ಆಲ್ಟ್‌ಮ್ಯಾನ್, ಓಪನ್ ಎಐನ ಹೊಸ ಮಂಡಳಿ ಹಾಗೂ ಸತ್ಯ ಬೆಂಬಲದೊಂದಿಗೆ ಹಳೆಯ ಕಂಪನಿಗೆ ಮರಳುತ್ತಿದ್ದೇನೆ. ಮೈಕ್ರೋಸಾಫ್ಟ್ ಜೊತೆ ಬಲಿಷ್ಠ ಸಂಬಂಧ ಬೆಳೆಸುತ್ತೇನೆ ಎಂದಿದ್ದರು.

ಓಪನ್ ಎಐ ಲಾಭದ ಉದ್ದೇಶವಿಲ್ಲದ ಕಂಪನಿಯಾಗಿತ್ತು. ಕೃತಕ ಬುದ್ಧಿವಂತಿಕೆಯನ್ನು ಸುರಕ್ಷಿತವಾಗಿ ಬೆಳೆಸುವ ದೃಷ್ಟಿಯಿಂದ ಈ ಕಂಪನಿ ರೂಪಿಸಲಾಗಿತ್ತು. ನಂತರ ಈ ಕಂಪನಿಯನ್ನು ಲಾಭೋದ್ದೇಶದ ಸಂಸ್ಥೆಯಾಗಿ ಪರಿವರ್ತಿಸಲಾಗಿತ್ತು.

# ಬಸಾಪುರ ತರಳಬಾಳು ಶಾಲೆಯಲ್ಲಿ ಕನ್ನಡ ರಾಜ್ಯೋತ್ಸವ



ದಾವಣಗೆರೆ, ನ.22- ಬಸಾಪುರ ತರಳಬಾಳು ನರ್ಸರಿ ಮತ್ತು ಆಂಗ್ಲಮಾಧ್ಯಮ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 68ನೇ ಕನ್ನಡ ರಾಜ್ಯೋತ್ಸವ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಕನ್ನಡ ಮತ್ತು ಕರ್ನಾಟಕ ರಾಜ್ಯ ನಡೆದು ಬಂದ ದಾರಿಯ ಬಗ್ಗೆ ಮಕ್ಕಳಿಗೆ ತಿಳಿಸಲಾಯಿತು. ಮಕ್ಕಳು ನಾಡಗೀತೆ ಹಾಡಿದರು.

# ಸಹಕಾರಿ ಕ್ಷೇತ್ರದಿಂದ ರೈತರಿಗೆ ಅನುಕೂಲ: ಶಾಂತನಗೌಡ



## ಹೊನ್ನಾಳಿಯಲ್ಲಿ ಸಹಕಾರ ಸಪ್ತಾಹ

ಹೊನ್ನಾಳಿ,ನ.22- ಆಡು ಮುಟ್ಟದ ಸೊಪ್ಪಿಲ್ಲ ಎನ್ನುವಂತೆ ಸಹಕಾರಿ ಕ್ಷೇತ್ರ ಎಲ್ಲಾ ರಂಗಗಳಲ್ಲಿ ತನ್ನದೇ ಆದ ಸಹಕಾರಿ ಸೇವೆ ನೀಡುತ್ತಾ ಬಂದಿದ್ದು, ಪ್ರಕೃತಿ ವಿಕೋಪಗಳಂತಹ ಸಂದರ್ಭದಲ್ಲಿ ವಿಶೇಷವಾಗಿ ಸಹಕಾರಿ ಕ್ಷೇತ್ರ ರೈತರ ಅನುಕೂಲಕ್ಕಾಗಿ ಕೆಲಸ ಮಾಡುತ್ತಿದೆ ಎಂದು ಶಾಸಕ ಡಿ.ಜಿ.ಶಾಂತನಕಗೌಡ ಹೇಳಿದರು.

ಹೊನ್ನಾಳಿ ತಾಲ್ಲೂಕಿನ ಗೊಲ್ಲರಹಳ್ಳಿಯ ತರಳಬಾಳು ಸಮುದಾಯ ಭವನದಲ್ಲಿ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ, ಸಹಕಾರ ಇಲಾಖೆ (ದಾವಣಗೆರೆ), ಜಿಲ್ಲಾ ಸಹಕಾರ ಯೂನಿಯನ್, ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್, ಶಿವಮೊಗ್ಗ ಜಿಲ್ಲಾ ಹಾಲು ಒಕ್ಕೂಟ, ಅವಳಿ ತಾಲ್ಲೂಕುಗಳ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಹಾಗೂ ಹಾಲು ಉತ್ಪಾದಕರ ಸಹಕಾರ ಸಂಘಗಳು ತಾಲ್ಲೂಕಿನ ಇತರೆ ಸಂಘಗಳ ಸಹಯೋಗದಲ್ಲಿ ಮೊನ್ನೆ ಆಯೋಜಿಸಲಾಗಿದ್ದ 70ನೇ ಅಖಿಲ ಭಾರತ ಸಹಕಾರ ಸಪ್ತಾಹ ಸಮಾರೋಪ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಡಿಸೆಂಬರ್‌ನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಸಹಕಾರ ಸಚಿವರು ಸಾಲಮನ್ನಾ ಹಾಗೂ ಸಹಕಾರಿ ಸಂಘಗಳಿಗೆ ಸಂಬಂಧಿಸಿದ ಸಮಸ್ಯೆಗಳ ಕುರಿತು ಚರ್ಚಿಸಲು ವಿಶೇಷ ಸಭೆ ಕರೆಯುವುದಾಗಿ ಹೇಳಿದ್ದಾರೆ ಎಂದು ಅವರು ತಿಳಿಸಿದರು.

ಒಂದು ವೇಳೆ ಸರ್ಕಾರ ಸಾಲ ಮನ್ನಾ ಮಾಡಲು ಮುಂದಾದರೆ ಹೊನ್ನಾಳಿ ಮತ್ತು ನ್ಯಾಮತಿ ಅವಳಿ ತಾಲ್ಲೂಕಿನ ರೈತರ ಅಂದಾಜು ಎರಡೂವರೆ ಕೋಟಿ ರು. ಸಾಲ ಮನ್ನಾ ಸೌಲಭ್ಯ ರೈತರಿಗೆ ಸಿಗಲಿದೆ ಎಂದರು.

ನಮ್ಮ ಸರ್ಕಾರ 3 ಲಕ್ಷ ರೂ. ಬಡ್ಡಿ ರಹಿತ ಸಾಲವನ್ನು ನೀಡುತ್ತಿದ್ದು, ಇದೀಗ ಇದನ್ನು 5 ಲಕ್ಷಕ್ಕೆ ಹೆಚ್ಚಿಸಲಾಗಿದೆ. ಈ ಕುರಿತಂತೆ ಅಧಿವೇಶನದಲ್ಲಿ ಮುಖ್ಯಮಂತ್ರಿಯವರು ಸಹಕಾರಿ ಸಚಿವರೊಂದಿಗೆ ಚರ್ಚಿಸಿದ್ದರೂ ಕೂಡ ರೈತರ ಸಾಲ ಮನ್ನಾ ಮಾಡುವ ವಿಚಾರದಲ್ಲಿ ಸಹಕಾರಿ ಸಚಿವರು ಮತ್ತು ಮುಖ್ಯಮಂತ್ರಿಯವರಿಗೆ ಒತ್ತಾಯ ಮಾಡುವುದಾಗಿ ಭರವಸೆ ನೀಡಿದದರು.

ಮಾಜಿ ಶಾಸಕ ಎಂ.ಪಿ.ರೇಣುಕಾಚಾರ್ಯ ಮಾತನಾಡಿ, ಪ್ರಸ್ತುತ ಸಹಕಾರಿ ಕ್ಷೇತ್ರ ದೇಶದ ಉದ್ದಗಲಕ್ಕೂ ಹೆಮ್ಮರವಾಗಿ ಬೆಳೆದು ನಿಂತಿದೆ. ಈ ಕ್ಷೇತ್ರದ ಅಭಿವೃದ್ಧಿಗೆ ಪಾರದರ್ಶಕ ಮತ್ತು ಪ್ರಾಮಾಣಿಕ ಸೇವೆ ಬಹು ಮುಖ್ಯವಾಗಿದ್ದು, ಸಾಲ ಪಡೆಯುವುದು ಎಷ್ಟು ಮುಖ್ಯವೋ ಮರುಪಾವತಿ ಕೂಡ ಅಷ್ಟೇ ಮುಖ್ಯವಾಗುತ್ತದೆ ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಹಾಲು ಉತ್ಪಾದಕ ಸಹಕಾರ ಸಂಘಗಳ ಒಕ್ಕೂಟದ ನಿರ್ದೇಶಕ ಹನುಮನಹಳ್ಳಿ ಬಿ.ಜಿ. ಬಸವರಾಜಪ್ಪ ಮಾತನಾಡಿ, ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗಗಳ ವ್ಯಾಪ್ತಿಯನ್ನು ಹೊಂದಿರುವ ಹಾಲು ಉತ್ಪಾದಕರ ಒಕ್ಕೂಟ ಪ್ರಕೃತಿ ವಿಕೋಪಗಳಂತಹ ಸಂದರ್ಭದಲ್ಲಿ ರೈತರಿಗೆ ನೆರವಿನ ರೂಪದಲ್ಲಿ ಹಾಲು ಒಕ್ಕೂಟ ಮಹತ್ವದ ಪಾತ್ರ ವಹಿಸುತ್ತಿದೆ. ಮೂರು ಜಿಲ್ಲೆಗಳಲ್ಲಿಯೇ ಹೊನ್ನಾಳಿ-ನ್ಯಾಮತಿ ಅವಳಿ ತಾಲ್ಲೂಕುಗಳು ಅತೀ ಹೆಚ್ಚು ಹಾಲು ಉತ್ಪಾದಿಸುವ ಮೂಲಕ ಮುಂಚೂಣಿಯಲ್ಲಿದೆ ಎಂದು ಹೇಳಿದರು.

ಜಿಲ್ಲಾ ಸಹಕಾರಿ ಯೂನಿಯನ್ ಅಧ್ಯಕ್ಷ ಸಿರಿಗೆರೆ ರಾಜಣ್ಣ ಮಾತನಾಡಿ, ದೇಶದ ಸುಮಾರು 6 ಸಾವಿರ ಕೃಷಿ ಪತ್ತಿನ ಸಹಕಾರ ಸಂಘಗಳ ಗಣಕೀಕರಣಕ್ಕಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸೇರಿ 2513 ಕೋಟಿ ಹಣ ಕಾಯ್ದಿರಿಸಿದೆ ಎಂದು ಹೇಳಿದರು.

ಮಾಜಿ ಶಾಸಕ ಡಾ. ಡಿ.ಬಿ.ಗಂಗಪ್ಪ, ಡಿ.ಸಿ.ಸಿ. ಬ್ಯಾಂಕ್ ಮಾಜಿ ಅಧ್ಯಕ್ಷ ಎಚ್.ಷಣ್ಮುಖಪ್ಪ, ಸಹಕಾರ ರತ್ನ ಪ್ರಶಸ್ತಿ ಪುರಸ್ಕೃತ ಜಗದೀಶ್ ಬಣಕಾರ್, ಕೆ.ಎಚ್.ಬಸಪ್ಪ, ಪಿ.ಎಲ್.ಡಿ. ಬ್ಯಾಂಕ್ ಅಧ್ಯಕ್ಷ ಟಿ.ಜಿ.ರಮೇಶ್ ಗೌಡ, ಶಿವಬ್ಯಾಂಕ್ನ ಚಂದ್ರೇಗೌಡ, ಎಚ್.ಎ.. ಗದ್ದಿಗೇಶ್ ಕೆ.ಎಸ್. ಸೋಮಶೇಖರ್, ವರದರಾಜಪ್ಪಗೌಡ, ರಮೇಶ್ ಸೇರಿದಂತೆ ಅನೇಕ ಸಹಕಾರಿ ಧುರೀಣರು ಭಾಗವಹಿಸಿದ್ದರು.

# ಕೃಷಿ ಯೋಜನೆಗಳ ಜಾರಿಗೆ ಸೂಚನೆ

(1ನೇ ಪುಟದಿಂದ) ತೊಗರಿಯಲ್ಲೇ ರೈತರಿಗೆ ಹೆಚ್ಚು ಲಾಭ ಬಂದಿದೆ. ಹೀಗಾಗಿ ನೀರಾವರಿ ಪ್ರದೇಶದಲ್ಲೂ ತೊಗರಿ ಬೆಳೆಗೆ ಪ್ರೋತ್ಸಾಹ ನೀಡಬೇಕು ಎಂದು ಸಚಿವರು ತಿಳಿಸಿದರು.

ಹೆಚ್ಚುತ್ತಿರುವ ತಾಪಮಾನ, ಕುಸಿಯುತ್ತಿರುವ ಫಲವತ್ತತೆ ಮುಂತಾದ ಸಮಸ್ಯೆಗಳು ಹೆಚ್ಚಾಗುತ್ತಿವೆ. ಇಂತಹ ವಾತಾವರಣದಲ್ಲಿ ಸೂಕ್ತ ಬೆಳೆ ಪದ್ಧತಿ ಹಾಗೂ ತಳಿಗಳನ್ನು ಕಂಡುಕೊಳ್ಳಬೇಕಿದೆ. ಇದಕ್ಕಾಗಿ ಕೃಷಿ ವಿಶ್ವವಿದ್ಯಾಲಯಗಳ ಪರಿಣಿತರು ಹಾಗೂ ಕೃಷಿ ವಿಜ್ಞಾನಿಗಳ ಸಹಕಾರ ಪಡೆಯಬೇಕು ಎಂದೂ ಅವರು ಹೇಳಿದರು.

ಸಭೆಯಲ್ಲಿ ಮಾತನಾಡಿದ ಕೃಷಿ ಇಲಾಖೆ ಜಂಟಿ ನಿರ್ದೇಶಕ ಶ್ರೀನಿವಾಸ್ ಚಿಂತಾಲ್, ಜಿಲ್ಲೆಯಲ್ಲಿ 1,50,621 ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ಹಾನಿಯಾಗಿದೆ. 116.97 ಕೋಟಿ ರೂ. ಪರಿಹಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಮುಂಗಾರು ಹಂಗಾಮಿನಲ್ಲಿ 4,77,728 ತಾಕುಗಳಲ್ಲಿ ಬೆಳೆ ಸಮೀಕ್ಷೆ ನಡೆಸಲಾಗಿದೆ ಎಂದು ಹೇಳಿದರು.

**ಖರೀದಿಯಲ್ಲಿ ವಂಚನೆ :** ರೈತರಿಂದ ಭತ್ತ ಖರೀದಿಸಿ ಹಣ ನೀಡದೇ ವಂಚನೆ ಮಾಡುವ ಘಟನೆಗಳು ನಡೆಯುತ್ತಿವೆ. ಈ ರೀತಿಯ ವಂಚನೆಗೆ ಸಿಲುಕದಂತೆ ರೈತರಲ್ಲಿ ಎಚ್ಚರಿಕೆ ಮೂಡಿಸಬೇಕು. ಖರೀದಿ ಕೇಂದ್ರಗಳನ್ನು ತೆರೆಯಬೇಕು ಎಂದು ಶಾಸಕ ಕೆ.ಎಸ್. ಬಸವಂತಪ್ಪ ಸಭೆಯಲ್ಲಿ ಒತ್ತಾಯಿಸಿದರು.

**ಉಪ ನಿರ್ದೇಶಕರಿಗೆ ನೋಟಿಸ್ :** ರೈತರ ವಿವರಗಳನ್ನು ದಾಖಲಿಸುವಲ್ಲಿ ಲೋಪಗಳಾಗಿವೆ. ಇದರಿಂದಾಗಿ ರೈತರ ಪರಿಹಾರಕ್ಕೆ ಸಮಸ್ಯೆಯಾಗಿದೆ ಎಂದು ಶಾಸಕರಾದ ಶಿವಗಂಗ ಬಸವರಾಜ್ ಹಾಗೂ ಕೆ.ಎಸ್. ಬಸವಂತಪ್ಪ ಅವರು ಕೃಷಿ ಇಲಾಖೆ ಉಪ ನಿರ್ದೇಶಕ ಸಿದ್ದೇಶ್ ವಿರುದ್ಧ ದೂರಿದರು. ಈ ಬಗ್ಗೆ ನೋಟಿಸ್ ಕಳಿಸುವಂತೆ ಸಚಿವ ಚಲುವರಾಯಸ್ವಾಮಿ ತಿಳಿಸಿದರು.

ಸಭೆಯಲ್ಲಿ ಕೃಷಿ ಇಲಾಖೆ ಅಪರ ನಿರ್ದೇಶಕರಾದ ವಿ.ಜಿ.ಪಾಟೀಲ್, ಅಪರ ಜಿಲ್ಲಾಧಿಕಾರಿ ಪಿ.ಎನ್. ಲೋಕೇಶ್, ದಾವಣಗೆರೆ, ಚಿತ್ರದುರ್ಗ, ಹಾವೇರಿ ಜಿಲ್ಲೆಗಳ ಕೃಷಿ ಅಧಿಕಾರಿಗಳು ಭಾಗವಹಿಸಿದ್ದರು.

## ಚಿಂತಾಲ್ ಪ್ರಯೋಗಗಳಿಗೆ ಮೆಚ್ಚುಗೆ

ಕೃಷಿ ಇಲಾಖೆ ಜಂಟಿ ನಿರ್ದೇಶಕ ಶ್ರೀನಿವಾಸ್ ಚಿಂತಾಲ್ ಅವರು ಸಭೆಗೆ ಚೆಲ್ಲು ಭತ್ತ ಬಿತ್ತನೆ, ಡ್ರಮ್ ಮಾದರಿ ಬಿತ್ತನೆ ಹಾಗೂ ಯಾಂತ್ರೀಕೃತ ಬಿತ್ತನೆ ಪ್ರಯೋಗಗಳ ಬಗ್ಗೆ ಮಾಹಿತಿ ನೀಡಿದರು. ಅಲ್ಲದೇ, ಕಡಿಮೆ ನೀರಿನಲ್ಲಿ ಭತ್ತ ಬೆಳೆಯುವ ಬಗ್ಗೆ ನಡೆಸಿದ ಪ್ರಯೋಗ ಯಶಸ್ವಿಯಾಗಿದೆ ಎಂದು ಹೇಳಿದರು.

ಅಕ್ಕಡಿ ಸಾಲಿನಲ್ಲಿ ತೊಗರಿ ಬಿತ್ತನೆಗೆ ಪ್ರೋತ್ಸಾಹ ಹಾಗೂ ಉದ್ದು - ಹಲಸಂದೆಯನ್ನು ಹೊಲದ ಬದುಗಳ ಮೇಲೆ ಬೆಳೆಯುವ ಪ್ರಯೋಗ ಕೈಗೊಂಡಿರುವ ಬಗ್ಗೆ ತಿಳಿಸಿದರು.

ಈ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ ಕೃಷಿ ಸಚಿವ ಎನ್. ಚಲುವರಾಯ ಸ್ವಾಮಿ, ಯಾಂತ್ರಿಕ ಬಿತ್ತನೆಯಲ್ಲಿ ಉಳಿದ ಜಿಲ್ಲೆಗಳಿಗೆ ಹೋಲಿಸಿದರೆ ದಾವಣಗೆರೆ ಮುಂಚೂಣಿಯಲ್ಲಿದೆ. ಬೇರೆ ಜಿಲ್ಲೆಗಳಲ್ಲಿಯೂ ಇದೇ ಮಾದರಿ ಅನುಸರಿಸಬೇಕು ಎಂದು ಹೇಳಿದರು

# ಹೆಗಡೆ ಅಧಿಕಾರವಧಿ ವಿಸ್ತರಣೆ

**(1ನೇ ಪುಟದಿಂದ)** ವಿಂಗಡಣೆಯನ್ನು ತಪ್ಪಿಸಿ ಸಮುದಾಯವನ್ನು ಒಟ್ಟಾಗಿ ಪರಿಗಣಿಸಲಾಗುವುದು.

ಕಳೆದ ಎಂಟು ವರ್ಷಗಳ ಹಿಂದೆಯೇ ವರದಿ ಸೋರಿಕೆಯಾಗಿ ಈ ಸಮುದಾಯಗಳ ಕೆಂಗಣ್ಣಿಗೆ ಗುರಿಯಾಗಿತ್ತು. ಮತ್ತೆ ಅಧಿಕಾರಕ್ಕೆ ಬಂದ ಸಿದ್ದರಾಮಯ್ಯ, ತಮ್ಮ ಹಿಂದಿನ ಆಡಳಿತಾವಧಿಯಲ್ಲಿ ಸಿದ್ಧಗೊಂಡಿರುವ ಸಾಮಾಜಿಕ - ಆರ್ಥಿಕ - ಶೈಕ್ಷಣಿಕ ವರದಿಯನ್ನು ಅನುಷ್ಠಾನಗೊಳಿಸಲು ಆಸಕ್ತಿ ತೋರಿದರು. ಶಾಶ್ವತ ಆಯೋಗದ ಹಾಲಿ ಅಧ್ಯಕ್ಷರು ನೀಡುವ ವರದಿಯನ್ನು ಸ್ವೀಕರಿಸಿ ಅನುಷ್ಠಾನಗೊಳಿಸುವುದಾಗಿ ಹೇಳಿಕೆ ನೀಡಿದ ಬೆನ್ನಲ್ಲೇ ಪಕ್ಷಾತೀತವಾಗಿ ಈ ಸಮುದಾಯಗಳ ಜನಪ್ರತಿನಿಧಿಗಳು ಮತ್ತು ಸಂಘಟನೆಗಳು ವಿರೋಧ ವ್ಯಕ್ತಪಡಿಸಿದವು.

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೇರಿದಂತೆ ಸಂಪುಟದ ಸಹೋದ್ಯೋಗಿಗಳೇ ಅಪಸ್ವರ ಎತ್ತಿ ಕಾಂತರಾಜ್ ವರದಿಯಲ್ಲಿನ ಲೋಪದೋಷಗಳನ್ನು ಸರಿಪಡಿಸಿ ಅನುಷ್ಠಾನಗೊಳಿಸಲು ಮುಖ್ಯಮಂತ್ರಿ ಮೇಲೆ ಒತ್ತಡ ತಂದರು.

ಲೋಕಸಭಾ ಚುನಾವಣೆ ಸನಿಹದಲ್ಲಿ ಜಾತಿ ಕಲಹಕ್ಕೆ ಅವಕಾಶ ಮಾಡಿಕೊಡಬಾರದು ಮತ್ತು ಸರ್ಕಾರದ ನಿಲುವು ಅಚಲವಾಗಿರಬೇಕೆಂಬ ಕಾರಣಕ್ಕಾಗಿ ಮುಖ್ಯಮಂತ್ರಿ ಅವರು ಉಂಟಾಗಿರುವ ಲೋಪದೋಷವನ್ನು ಸರಿಪಡಿಸಲು ಆಯೋಗದ ಅಧ್ಯಕ್ಷರ ಅವಧಿಯನ್ನು ವಿಸ್ತರಿಸಿದ್ದಾರೆ ಎಂದು ಉನ್ನತ ಮೂಲಗಳು ತಿಳಿಸಿವೆ. ವರದಿ ಬಂದ ನಂತರ ಸಚಿವ ಸಂಪುಟದ ಉಪಸಮಿತಿ ರಚಿಸಿ, ಆ ಸಮಿತಿಗೆ ತಜ್ಞರ ನೇಮಕಾತಿ ಮಾಡಿ, ಅವರು ನೀಡುವ ವರದಿಯನ್ನು ಆಧರಿಸಿ ಸರ್ಕಾರ ತೀರ್ಮಾನ ಕೈಗೊಳ್ಳಲಿದೆ.

ಸಮಾಜದ ಎಲ್ಲಾ ವರ್ಗಗಳಲ್ಲಿ ಇರುವ ಕಡುಬಡವರಿಗೆ ಮೀಸಲಾತಿ ಕಲ್ಪಿಸುವ ಸಂಬಂಧ ಉಪಸಮಿತಿ ತೀರ್ಮಾನ ಮಾಡಲಿದೆ.

ಸರ್ಕಾರಿ ಸೌಲಭ್ಯಗಳು ಉಳ್ಳವರಿಗೇ ದೊರೆಯುತ್ತದೆ ಎಂಬ ಅಪವಾದದಿಂದ ದೂರವಾಗಿ ಸಾಮಾಜಿಕ-ಆರ್ಥಿಕ-ಶೈಕ್ಷಣಿಕವಾಗಿ ಹಿಂದುಳಿದ ಎಲ್ಲರಿಗೂ ಶಿಕ್ಷಣ, ಉದ್ಯೋಗ ಹಾಗೂ ಸರ್ಕಾರಿ ಸವಲತ್ತುಗಳನ್ನು ದೊರೆಯುವಂತೆ ಮಾಡಲು ಉಪಸಮಿತಿ ಶಿಫಾರಸ್ಸು ಮಾಡಲಿದೆ.

# ಸಾಯಿಬಾಬಾ ಸರ್ವಧರ್ಮಗಳ ಪ್ರತೀಕ

(1ನೇ ಪುಟದಿಂದ) ಸಂತರು ನೆಲೆಸಿದ ಪುಣ್ಯಭೂಮಿಯಾಗಿದೆ. ಅಭಿವೃದ್ಧಿಯ ಜೊತೆ ಧಾರ್ಮಿಕ ಸೇವೆ ಅಗತ್ಯ ಎಂದು ಅಭಿಮತ ವ್ಯಕ್ತಪಡಿಸಿದರು.

ಸೊಕ್ಕೆ ತಿಪ್ಪೇಸ್ವಾಮಿ ಅವರು ಸಚಿವಾಲಯದಲ್ಲಿ ಸೇವೆಗೈದಿದ್ದಾರೆ. ಇಂದು ಸ್ವಗ್ರಾಮದಲ್ಲಿ ಜನಕಲ್ಯಾಣಕ್ಕಾಗಿ ದೇವಸ್ಥಾನ ನಿರ್ಮಿಸಿ ಭಕ್ತಿ ಪರ್ವ ಮೆರೆದ ಅವರ ವ್ಯಕ್ತಿತ್ವ ಮಾದರಿಯಾಗಿದೆ ಎಂದರು.

ಶಾಸಕ ಬಿ.ದೇವೇಂದ್ರಪ್ಪ ಮಾತನಾಡಿ, ತಾಲ್ಲೂಕಿನಲ್ಲಿ ಬರ ಆವರಿಸಿರಬಹುದು. ಆದರೆ ಭಕ್ತಿ ಪರ್ವಕ್ಕೆ ಬರವಿಲ್ಲ. ಅಧ್ಯಾತ್ಮಿಕತೆಯಿಂದ ನೆಮ್ಮದಿ ಸಾಧ್ಯ. ಹಲವಾರು ಧಾರ್ಮಿಕ ಸ್ಥಳಗಳ ಕೇಂದ್ರವಾಗಿರುವ ತಾಲ್ಲೂಕಿನಲ್ಲಿ ಮೊದಲ ಬಾರಿಗೆ ಐತಿಹಾಸಿಕ ಶಿರಡಿ ಸಾಯಿಬಾಬಾ ದೇವಸ್ಥಾನ ನಿರ್ಮಿಸಿರುವುದು, ಬಾಬಾ ಭಕ್ತಾದಿಗಳ ದರ್ಶನಕ್ಕೆ ಅನುಕೂಲವಾಗಲಿದೆ ಎಂದರು.

ಮಾಜಿ ಶಾಸಕ ಎಸ್.ವಿ.ರಾಮಚಂದ್ರಪ್ಪ ಮಾತನಾಡಿ, ನೂರಾರು ಕಿಲೋಮೀಟರ್ ದೂರ ಕ್ರಮಿಸಿ, ದರ್ಶನ ಪಡೆಯಬೇಕಿದ್ದ ಶಿರಡಿ ಸಾಯಿಬಾಬಾ ದೇವಸ್ಥಾನವನ್ನು ಸ್ಥಳೀಯವಾಗಿ ನಿರ್ಮಿಸಿದ ತಿಪ್ಪೇಸ್ವಾಮಿ ಅವರ ಕಾಳಜಿ ಶ್ಲಾಘನೀಯ. ಸಾಯಿಬಾಬಾ ಅವರ ಕೃಪೆಯಿಂದ ಕ್ಷೇತ್ರದಲ್ಲಿ ಸಮೃದ್ಧ ಮಳೆ, ಬೆಳೆಯಾಗಿ. ರೈತರ ಬದುಕು ಹಸನಾಗಬೇಕು ಎಂದು ಪ್ರಾರ್ಥಿಸಿದರು.

ಐಎಎಸ್ ನಿವೃತ್ತ ಅಧಿಕಾರಿ ಕೆ.ಶಿವರಾಮ್ ಮಾತನಾಡಿ, ನಾನು ಜಿಲ್ಲಾಧಿಕಾರಿಯಾಗಿದ್ದ ವೇಳೆ ಸೊಕ್ಕೆಯಲ್ಲಿ ನಡೆಸಿದ್ದ ಗ್ರಾಮ ವಾಸ್ತವ್ಯ ಕಾರ್ಯಕ್ರಮ ಅವಿಸ್ಮರಣೀಯ. ಪ್ರಪಂಚದಲ್ಲಿ ಬಾಬಾ ಭಕ್ತ ಸಮೂಹ ಹೆಚ್ಚಾಗಿದ್ದು, ಸೊಕ್ಕೆ ಗ್ರಾಮದಲ್ಲಿ ಸಾಯಿಬಾಬಾ ದೇವಸ್ಥಾನ ನಿರ್ಮಾಣವಾಗಿರುವುದು ಸಂತಸದ ಸಂಗತಿ ಎಂದರು.

ಮಾಜಿ ಶಾಸಕ ಎಚ್.ಪಿ.ರಾಜೇಶ್ ಮಾತನಾಡಿ, ನನ್ನ ಆಡಳಿತಾವಧಿಯಲ್ಲಿ ಗುರುತಿಸಲಾಗಿದ್ದ 40 ಎಕರೆ ಸರ್ಕಾರಿ ಜಮೀನು ಪಾಳುಬಿದ್ದಿದೆ. ಶಾಸಕರು ಹಾಗೂ ಕೃಷಿ ಸಚಿವರು ಕಾಳಜಿ ವಹಿಸಿ ಸಿರಿಧಾನ್ಯಗಳ ಸಂಶೋಧನಾ ಕೇಂದ್ರ ಸ್ಥಾಪಿಸಬೇಕು. ಇದರಿಂದ ಬರದ ನಾಡಿನ ರೈತರಿಗೆ ಅನುಕೂಲವಾಗಲಿದೆ ಎಂದು ಮನವಿ ಮಾಡಿದರು.

ಗ್ರಾ.ಪಂ ಮಾಜಿ ಅಧ್ಯಕ್ಷೆ ಸ್ವಾತಿ ತಿಪ್ಪೇಸ್ವಾಮಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ದೇವಸ್ಥಾನದ ನಿರ್ಮಾತೃ ಹಾಗೂ ವಿವಿಧ ಇಲಾಖೆಗಳ ಸಚಿವರುಗಳಿಗೆ ಆಪ್ತ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದ ಸೊಕ್ಕೆ ಗ್ರಾಮದ ತಿಪ್ಪೇಸ್ವಾಮಿ ಸ್ವಾಗತಿಸಿದರು.

ಈ ಸಂದರ್ಭದಲ್ಲಿ ಡಾ.ಶಿವಾನುಭವ ಚರವರ್ಯ ಕರಿವೃಷಭ ದೇಶಿಕೇಂದ್ರ ಶಿವಯೋಗೀಶ್ವರ ಮಹಾಸ್ವಾಮೀಜಿ, ಮಂಡ್ಯ ಶಾಸಕ ರವಿಕುಮಾರ್ ಗೌಡ, ಚನ್ನಗಿರಿ ಶಾಸಕ ಬಸವರಾಜ್ ಶಿವಗಂಗಾ, ದಕ್ಷಿಣ ಭಾರತದ ಆರ್.ಎಸ್.ಎಸ್ ಪ್ರಮುಖ ಎನ್. ತಿಪ್ಪೇಸ್ವಾಮಿ, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಅಸಗೋಡು ಜಯಸಿಂಹ, ದಕ್ಷಿಣ ಕನ್ನಡದ ಖ್ಯಾತ ಉದ್ಯಮಿ ಪರ್ವತಶೆಟ್ಟು, ಚಲನಚಿತ್ರ ನಟ ಡಾಲಿ ಧನಂಜಯ್, ನಾಗಭೂಷಣ್, ಸಂಗೀತ ನಿರ್ದೇಶಕ ಅನೂಪ್ ಸಿಲಿನ್, ಪುಟ್ಟರಾಜ್, ಮುರಳಿ, ತಹಶೀಲ್ದಾರ್ ಸೈಯ್ಯದ್ ಸಾಧಿಕ್ ಉಲ್ಲಾ, ಗ್ರಾ.ಪಂ ಅಧ್ಯಕ್ಷ ತಿರುಮಲ ಮುಂತಾದವರು ಭಾಗವಹಿಸಿದ್ದರು.

# ವಾರದಲ್ಲೇ ಬರ ಪರಿಹಾರ ನಿರೀಕ್ಷೆ

**(1ನೇ ಪುಟದಿಂದ)** ವತಿಯಿಂದ 100 ಬೆಳೆ ಹೈಟೆಕ್ ಕಟಾವು ಕೇಂದ್ರಗಳನ್ನು ತೆರೆಯಲು ನಿರ್ಧರಿಸಲಾಗಿದೆ. ಈ ಹಿಂದೆ ಸಂಘಟನೆಗಳಿಗೆ ಕೃಷಿ ಉಪಕರಣಗಳ ನಿರ್ವಹಣೆಗೆ ಸಬ್ಸಿಡಿ ನೀಡಲಾಗುತ್ತಿತ್ತು. ಇನ್ನು ಮುಂದೆ ವ್ಯಕ್ತಿಗತವಾಗಿಯೂ ಸಬ್ಸಿಡಿ ನೀಡಲಾಗುವುದು ಎಂದು ಸಚಿವರು ತಿಳಿಸಿದರು.

ರೈತರಿಗೆ ನೀಡಲಾಗುವ ಇನ್‌ಪುಟ್ ಸಬ್ಸಿಡಿ ಹೆಚ್ಚಿಸುವ ಬಗ್ಗೆ ಕೇಂದ್ರ ಸರ್ಕಾರವೂ ಕ್ರಮ ತೆಗೆದುಕೊಳ್ಳಬೇಕು. ಕೇಂದ್ರಕ್ಕೆ ರಾಜ್ಯದಿಂದ ಹೆಚ್ಚಿನ ಪ್ರಮಾಣದ ತೆರಿಗೆ ಸಲ್ಲಿಕೆಯಾಗುತ್ತಿದೆ. ರಾಜ್ಯಕ್ಕೆ ನೆರವಾಗುವ ಬಗ್ಗೆ ಬಿಜೆಪಿಯ 26 ಸಂಸದರೂ ಒತ್ತಡ ಹೇರಬೇಕು ಎಂದು ಸಚಿವ ಚಲುವರಾಯಸ್ವಾಮಿ ಹೇಳಿದರು.


**ಉದ್ಯೋಗಾವಕಾಶ**
ನಮ್ಮ ಸಂಸ್ಥೆಯಿಂದ ಯುವತಿಯರಿಗೆ & ಮಹಿಳೆಯರಿಗೆ ಪ್ರಾಯೋಗಿಕ ತರಬೇತಿಯನ್ನು ನೀಡಿ ಹೆಸರಾಂತ ಕಂಪನಿಯಾದ ಸಂಜೀವಿನಿ ಹೆಲ್ತ್‌ಕೇರ್ ಸಂಸ್ಥೆಯಲ್ಲಿ ಉದ್ಯೋಗಾವಕಾಶ ನೀಡಲಾಗುತ್ತದೆ. ಸಂಬಳ, ಉಚಿತ ಊಟ, ವಸತಿಯೊಂದಿಗೆ 15000 ರಿಂದ 30,000, ವಿದ್ಯಾರ್ಹತೆ : 7ನೇ, 10ನೇ, ಪಿಯುಸಿ, ಡಿಗ್ರಿ, ಜಿಎನ್‌ಎಂ., ಎಎನ್‌ಎಂ
91486 83185, 95355 32369

**ಸೈಟ್, ಮನೆ ಮಾರಾಟಕ್ಕೆ**
ಆಂಜನೇಯ ಬಡಾವಣೆ
ಕಿರಣ್ ಭೂಸನೂರ್ (ಏಜೆಂಟ್)
98440 63409, 97315 63409
ಮನೆ : ಮೇಲೆ-ಕೆಳಗೆ ದಕ್ಷಿಣ 31x41.5, ಸೈಟ್ : ಉತ್ತರ 30x55.5. ನೇರವಾಗಿ ರಿಜಿಸ್ಟರ್ ಪಾರ್ಟಿಯಿಂದ ವ್ಯಾಪಾರ.
ಕೇವಲ ಅರ್ಧ ಪರ್ಸೆಂಟ್ (1/2%) ಕಮೀಷನ್ ನನ್ನದು

**ಶಾಮನೂರು ಹತ್ತಿರ ಡಾಲರ್ಸ್ ಕಾಲೋನಿಯಲ್ಲಿ ಸೈಟುಗಳು ಮಾರಾಟಕ್ಕಿವೆ**
70x62 South, West Corner, 30x62 Corner, 40x62 Corner, 40x40 South, 30x50 East.
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಅಡುಗೆ ಮಾಡಲು ಲಿಂಗಾಯತ ಮಹಿಳೆ ಬೇಕಾಗಿದ್ದಾರೆ**
ಎಂಸಿಸಿ ಎ ಬ್ಲಾಕ್, ಡಾ|| ಎಂ.ಸಿ. ಮೋದಿ ರಸ್ತೆ, ಚರ್ಚ್ ಹತ್ತಿರ, ದಾವಣಗೆರೆ.
90196 11201

**SHOP FOR RENT**
12'X12' MAMA'S JOINT ROAD, MISHRA PEDA BUILDING, MCC 'B' BLOCK, DAVANAGERE
98440 64565

**ಸೈಟುಗಳು ಮತ್ತು ಮನೆಗಳು ಮಾರಾಟಕ್ಕಿವೆ**
S.S. ಲೇಔಟ್ 30x40 ಉತ್ತರ, ಆಂಜನೇಯ ದಕ್ಷಿಣ 35x47 KHB ಪಕ್ಕ 30x50 ದಕ್ಷಿಣ ರಶ್ಮಿ ಹಿಂಭಾಗ 30x60 ಪೂರ್ವ .
ಏಜೆಂಟರು S. ಯಲ್ಲೋಜಿರಾವ್,
97418 11694

**ಬೇಕಾಗಿದ್ದಾರೆ**
ಮನೆ ಕೆಲಸಕ್ಕೆ ಮಹಿಳೆ/ಪುರುಷ ಬೇಕಾಗಿದ್ದಾರೆ.
ಸಂಪರ್ಕಿಸಿರಿ :
08192 254736

**ಬೇಕಾಗಿದ್ದಾರೆ**
ಸೂಪರ್ ಮಾರ್ಕೆಟ್‌ನಲ್ಲಿ ಹೆಲ್ಪರ್ ಕೆಲಸಕ್ಕೆ ಯುವಕ/ಯುವತಿಯರು ಬೇಕಾಗಿದ್ದಾರೆ. S & S MART ಹೈಟೆಕ್ ಹಾಸ್ಪಿಟಲ್ ರಸ್ತೆ, ದಾವಣಗೆರೆ.
74113 99485

**ಮನೆ ಬಾಡಿಗೆಗೆ ಇದೆ**
ವೀಣಾ ಕ್ಲಿನಿಕ್ ರೋಡ್ KSRTC ಬಸ್ ಸ್ಟ್ಯಾಂಡ್ ಹಿಂಭಾಗ ಮೊದಲನೆ ಮಹಡಿಯಲ್ಲಿ, 2 ಬೆಡ್ ರೂಮ್, ಮುನ್ಸಿಪಲ್ ಹಾಗೂ ಬೋರ್ ವೆಲ್ ನೀರಿನ ಸೌಕರ್ಯವಿರುವ ಮನೆ ಬಾಡಿಗೆಗೆ ಇದೆ. ಸಂಪರ್ಕಿಸಿ :
81059 11293

**ಕೆಲಸಕ್ಕೆ ಬೇಕಾಗಿದ್ದಾರೆ**
ಎಸ್.ಆರ್. ಕನ್‌ಸ್ಟ್ರಕ್ಷನ್ಸ್
Tally ಬರುವ ಹಾಗೂ ಯಾವುದೇ ಡಿಗ್ರಿ ಆಗಿರುವ, ಕನ್ನಡ, ಹಿಂದಿ, ಇಂಗ್ಲಿಷ್ ಮಾತನಾಡಲು ಮತ್ತು ಕಂಪ್ಯೂಟರ್ ಜ್ಞಾನವಿರುವವರು ಬೇಕಾಗಿದ್ದಾರೆ. ಬೆ. 10ರಿಂದ6
76769 99539

**ROOM TO-LET FOR RENT**
Room Vacant near Swimming Pool, MCC B block,1st floor with attached bathroom
99721 02927

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು.
99863 61250
80730 24690

**2 BHK ಮನೆ ಲೀಸ್‌ಗೆ ಇದೆ**
ಶಿವಕುಮಾರಸ್ವಾಮಿ ಬಡಾವಣೆಯಲ್ಲಿ ಡಾಬಾ ಸ್ಟಾಪ್, ದಾವಣಗೆರೆ.
ಬೋರ್‌ವೆಲ್ ನೀರಿನ ವ್ಯವಸ್ಥೆ ಇದೆ.
72042 66144

**ಸೈಟ್ ಬೇಕಾಗಿದೆ**
ಎಸ್.ಎಸ್. ಲೇಔಟ್, ಇನ್‌ಡೋರ್ ಸ್ಟೇಡಿಯಂ ಹಿಂಭಾಗ ಅಥವಾ ಚಿಗಟೇರಿ ಬಡಾವಣೆಯಲ್ಲಿ 40x60 ಉತ್ತರ ದಿಕ್ಕಿನ ಸೈಟ್ ಬೇಕಾಗಿರುತ್ತದೆ.
99001 42052

**ಬೇಕಾಗಿದ್ದಾರೆ**
ಹೋಟೆಲ್‌ನಲ್ಲಿ ಸಪ್ಲೈಯರ್ ಕೆಲಸಕ್ಕೆ ನುರಿತ ಯುವಕರು ಬೇಕಾಗಿದ್ದಾರೆ.
ಕೆಲಸದ ಸಮಯ : 12 ರಿಂದ 10ರವರೆಗೆ
95388 96927

**ACCOUNTANT FEMALE**
Experienced accountant Required for reputed Plywood Company in APMC YARD. Opp: DCM TOWNSHIP, DVG.
94495 85680

**ಮೆಡಿಕಲ್ ಶಾಪ್‌ನಲ್ಲಿ ಕೆಲಸ ಮಾಡಲು ಮಹಿಳೆಯರು ಬೇಕಾಗಿದ್ದಾರೆ**
ವಿದ್ಯಾರ್ಹತೆ : ಡಿಗ್ರಿ
ವಿದ್ಯಾರ್ಥಿಭವನ್, ದಾವಣಗೆರೆ.
98861 09946

**WANTED**
Receptionist (Female)
Must be Fluent in Kannada, English & Hindi
Contact between 11 am to 4-30 pm
Personal Training Studio
'Sree Sadha', # 2659, MCC 'B' Block, Dental College Road, Davangere - 4.
99004 50738

**ಬೇಕಾಗಿದ್ದಾರೆ**
ಬಿ.ಎ. ಬಿ.ಇಡಿ., -1 (ENG)
ಬಿ.ಎಸ್ಸಿ., -2
ಹಾಸ್ಟೆಲ್ ವಾರ್ಡನ್ -1 (ಮಹಿಳೆ)
ಎಸ್.ಆರ್.ಪಿ. ಕಾನ್ವೆಂಟ್
17ನೇ ಕ್ರಾಸ್, ಆಂಜನೇಯ ಬಡಾವಣೆ, ದಾವಣಗೆರೆ.
77950 66883, 78927 27892

**ಎಕ್ಸ್‌ಚೇಂಜ್ ಆಫರ್**
ದಿನ ಮತ್ತು ವಾರದ ಕಂತಿನಲ್ಲಿ ಸೋಫಾ, ಕುಷನ್, ಫರ್ನಿಚರ್ ಹಾಗೂ ಸ್ಪಂಜ್ ಬೆಡ್‌ಗಳಿಗೆ ಎಕ್ಸ್‌ಚೇಂಜ್ ಇರುತ್ತದೆ (ಕಂತಿನ ಸೌಲಭ್ಯ)
79751 07268

**ಹೆಸರು ಬದಲಾವಣೆ**
ಆನಂದ್ ಎಂ.ಆರ್. ಬಿನ್ ಮಣಕೂರು ರೇವಣಪ್ಪ, ವಯಸ್ಸು 29 ವರ್ಷ ವಾಸ ಡೋರ್ ನಂ. 137, ದಾಸರ ಕಾಲೋನಿ ರೋಡ್ ಅಂಗನವಾಡಿ ಕೇಂದ್ರದ ಹತ್ತಿರ ಜರಿಕಟ್ಟೆ ಗ್ರಾಮದ ವಾಸಿಯಾದ ನಾನು ಮೇಲ್ಕಂಡ ವಿಳಾಸದಲ್ಲಿ ವಾಸವಾಗಿರುತ್ತೇನೆ. ನನ್ನ ಹೆಂಡತಿಯಾದ ಸವಿತ ಎಂ.ಎಸ್. ಇವರಿಗೆ ದಿನಾಂಕ : 27.09.2022 ರಂದು ಎಸ್.ಎಸ್.ಐ.ಎಂ.ಎಸ್.ಅಂಡ್ ಆರ್ ಹಾಸ್ಪಿಟಲ್ (ಹೈಟೆಕ್ ಆಸ್ಪತ್ರೆ) ದಾವಣಗೆರೆ ಇಲ್ಲಿ ಗಂಡು ಮಗು ಜನನವಾಗಿರುತ್ತದೆ. ನಾನು ನನ್ನ 1 ವರ್ಷದ ಮಗುವಿಗೆ ಪ್ರತ್ಯೂಷ್ ಎಂ.ಎ (Prathyush M.A) ಎಂದು ಹೆಸರು ಇಟ್ಟಿದ್ದು, ಈಗ ಅವನ ಹೆಸರನ್ನು ವಿಯಾನ್ಷ್ ಆರವ್ ಎಂ.ಎ. (Viyaansh Arav M.A) ಎಂದು ದಾವಣಗೆರೆ ನೋಟರಿಯವರ ಸಮ್ಮುಖದಲ್ಲಿ ದಿನಾಂಕ : 22.11.2023 ರಂದು ಬದಲಾಯಿಸಿಕೊಂಡಿರುತ್ತೇನೆ. ಇನ್ನು ಮುಂದಿನ ಎಲ್ಲಾ ವ್ಯವಹಾರಗಳು ವಿಯಾನ್ಷ್ ಆರವ್ ಎಂ.ಎ. ಹೆಸರಿನಲ್ಲಿ ಮುಂದುವರೆಸುತ್ತೇನೆ.
ವಿಯಾನ್ಷ್ ಆರವ್ ಎಂ.ಎ.

**ಹೆಸರು ಸ್ಪಷ್ಟೀಕರಣ**
ನಾನು ಶ್ರೀ ಬಸವರಾಜು ಎಂ. ಬಿನ್ ಮಹೇಶ್ವರಪ್ಪ 54 ವರ್ಷ, #01, ಶ್ರೀ ಸಾಯಿ ಕುಟೀರ, 2ನೇ ಮೇನ್, 7ನೇ ಕ್ರಾಸ್, ನೆಲಮಂಗಲ ತಾಲ್ಲೂಕು, ಬೆಂಗಳೂರು ವಾಸಿಯಾದ ನಾನು ನನ್ನ ಪಾನ್ ಕಾರ್ಡ್‌ನಲ್ಲಿ ಬಸವರಾಜು ಎಂ. ಬಿನ್ ಮಹಾದೇವಪ್ಪ ಎಂದು ತಪ್ಪಾಗಿ ನಮೂದಾಗಿದೆ. ಆಧಾರ್ ಕಾರ್ಡ್‌ನಲ್ಲಿ ನನ್ನ ಹೆಸರು ಬಸವರಾಜು ಎಂ. ಬಿನ್ ಮಹೇಶ್ವರಪ್ಪ ಎಂದು ಸರಿಯಾಗಿ ಇದೆ. ಇನ್ನು ಮುಂದೆ ನನ್ನ ಎಲ್ಲಾ ದಾಖಲೆಗಳಲ್ಲೂ ಹಾಗೂ ವ್ಯವಹಾರಗಳಲ್ಲೂ ಈ ಹೆಸರಿನಂತೆ ಇರುತ್ತದೆ ಎಂದು ದಿನಾಂಕ : 20.11.2023 ರಂದು ನೋಟರಿಯವರ ಮುಂದೆ ಪ್ರಮಾಣ ಮಾಡಿದ್ದೇನೆ.
ಸಹಿ /- ಬಸವರಾಜು ಎಂ.

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**WANTED**
Female Candidate having the degree of commerce is required to work in auditor office
Contact : B.G. Basavarajappa
# 43H, SJJM Complex, Jayadeva Circle Hadadi Road, Davangere.
990014 2052

**WANTED**
B.A./B.Sc./B.Com - 2
Aaya (Ladies) - 1
(ಕೆ.ಬಿ. ಬಡಾವಣೆ ಶಾಲೆಗೆ)
Contact :
99801 48289
98807 43838

**Loan Loan Loan**
We are providing All kinds of Loan Home loan, Mortgage loan, Home purchase/ site purchase and Construction loan,All type Katha we are accepting,with Bank Rate of Interest more information contact
74835 24662

**ಸೈಟ್ ಬೇಕಾಗಿದೆ**
ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ ಉತ್ತರ ದಿಕ್ಕಿನ 40x60 ಅಳತೆಯ ಸೈಟ್ ಬೇಕಾಗಿರುತ್ತದೆ.
99001 42052

**2 BHK ಮನೆ ಬಾಡಿಗೆಗೆ ಇದೆ**
2ನೇ ಮಹಡಿ, ಪಿ.ಜೆ. ಬಡಾವಣೆ, 2ನೇ ಮೇನ್, 1ನೇ ಕ್ರಾಸ್, ರೈತರ ಬೀದಿ, ದಾವಣಗೆರೆ-2.
97405 69252

**ಮಲ್ಲಿಕಾರ್ಜುನ ಪ್ಯಾಕೇಜ್ ಟೂರ್ಸ್**
ಬಟವಾಡಿ ವೃತ್ತ, ತುಮಕೂರು
ಫೋ : 84960 44942, 82774 09101
22.12.2023 ಐದು ಜ್ಯೋತಿರ್ಲಿಂಗ ವಿಮಾನ ಪ್ರವಾಸ :ಮಹಾಕಾಳೇಶ್ವರ, ಓಂಕಾರೇಶ್ವರ, ಭೀಮಾಶಂಕರ, ಘೃಷ್ಣೇಶ್ವರ, ತ್ರಂಭಕೇಶ್ವರ, ಶಿರಡಿ, ಅಜಂತಾ-ಎಲ್ಲೋರ, ಇಂದೋರ್, ಇತರೆ 8 ದಿನಗಳು.
06.01.2024 ಗುಜರಾತ್ ವಿಮಾನ ಪ್ರವಾಸ :ಪಟೇಲ್ ಪ್ರತಿಮೆ, ಸೋಮನಾಥ್, ನಾಗೇಶ್ವರ, ನಿಷ್ಕಳಂಕ ಮಹಾದೇವ, ದ್ವಾರಕಾ, ಪೋರ್ ಬಂದರ್, ಅಹಮದಾಬಾದ್, ಮಾತೃಗಯಾ, ಡಿಯು, ಮೊದೆರ 9 ದಿನಗಳು.
27.01.2024 ಕಾಶಿ, ವೈದ್ಯನಾಥ (ಜಾರ್ಖಂಡ್) ವಿಮಾನ ಪ್ರವಾಸ : ಕಾಶಿ, ಅಯೋಧ್ಯೆ, ಪ್ರಯಾಗ್ ರಾಜ್, ಗಯಾ, ಬುದ್ಧಗಯಾ, ವೈದ್ಯನಾಥ, 8 ದಿನಗಳು.
19.02.2024 ರಾಯಲ್ ರಾಜಸ್ಥಾನ ವಿಮಾನ ಪ್ರವಾಸ : 10 ದಿನಗಳು
ಎಲ್ಲಾ ಪ್ರವಾಸಕ್ಕೂ ಕಾಫಿ, ತಿಂಡಿ-ಊಟ, ತಿಂಡಿ-ಊಟ, ಡೀಲಕ್ಸ್ ರೂಂ, ಪ್ರಯಾಣ ವೆಚ್ಚ ಸೇರಿದೆ.
ಮಲ್ಲಿಕಾರ್ಜುನ ಟೂರ್ಸ್, ತುಮಕೂರು
8496044942, 8277409101

**ಸುಸಜ್ಜಿತ ಹೋಟೆಲ್ ಕೊಡುವುದಿದೆ**
ದಾವಣಗೆರೆಯ ಪ್ರತಿಷ್ಠಿತ ಬಡಾವಣೆಯಲ್ಲಿ ವೆಜ್ ಅಂಡ್ ನಾನ್ ವೆಜ್ ಹೋಟೆಲ್, ತಿಂಡಿ ತಿನಿಸುಗಳು, ಚಾಟ್ಸ್, ಕೆಫೆ ತಕ್ಷಣ ನಡೆಸಿಕೊಂಡು ಹೋಗಲು ಎಲ್ಲಾ ಅನುಕೂಲತೆಯುಳ್ಳ ಹೋಟೆಲ್ ಮಾರಾಟಕ್ಕಿದೆ. (ಕಟ್ಟಡ ಹೊರತುಪಡಿಸಿ) ಸಂಪರ್ಕಿಸಿ:
7760005504, 9986445843
What's app : 8105676876

**ಲೋನ್ ಕೊಡಲಾಗುವುದು**
ಹೋಮ್ ಲೋನ್, ಮನೆ ಖರೀದಿ, ಸೈಟ್ ಖರೀದಿ, ಕಮರ್ಷಿಯಲ್ ಪ್ರಾಪರ್ಟಿ ಲೋನ್, (ಲೋನ್ take over), ಮನೆ ಕಟ್ಟಲು loan ಕೊಡಲಾಗುವುದು,ಲೋನ್ ಅಮೌಂಟ್ 3 ಲಕ್ಷದಿಂದ 10 ಕೋಟಿವರೆಗೂ ಕೊಡಲಾಗುವುದು. ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ. (ಷರತ್ತುಗಳು ಅನ್ವಯ)
74835 24662

**ಪೂರ್ವ ದಿಕ್ಕಿನ ಕಾರ್ನರ್ ಸೈಟು ಮಾರಾಟಕ್ಕಿದೆ**
ದಾವಣಗೆರೆಯ ಪೈಲ್ವಾನ್ ಚನ್ನಬಸಪ್ಪ ಲೇಔಟ್‌ನಲ್ಲಿ (ಕರಿಗೌಡ್ರು ಲೇಔಟ್) 60 ಅಡಿ ರೋಡಿಗೆ ಹೊಂದಿಕೊಂಡಿರುವ ಪೂರ್ವ-ಉತ್ತರ ಕಾರ್ನರ್ ಸೈಟು ಮಾರಾಟಕ್ಕಿರುತ್ತದೆ. ಸೈಟ್ ಅಳತೆ : 1906 ಚ. ಅಡಿ ಗಳಿರುತ್ತದೆ. ಸೈಟ್ ನಂ. 64. ಸಂಪರ್ಕಿಸಿ :
98458 16221

**ಮನೆ ಮಾರಾಟಕ್ಕೆ ಇದೆ**
ಹರಿಹರದ ವಿದ್ಯಾನಗರ A ಬ್ಲಾಕ್, 60 ಅಡಿ ರಸ್ತೆಯಲ್ಲಿ 40 x 60 ಸೈಟಿನಲ್ಲಿ ಕಟ್ಟಿರುವ ಸುಸಜ್ಜಿತವಾದ ಡುಪ್ಲೆಕ್ಸ್ ಮನೆ ಮಾರಾಟಕ್ಕೆ ಇದೆ.
ಸಂಪರ್ಕಿಸಿ.
99862 45329

**ಮನೆ ಮಾರಾಟಕ್ಕಿದೆ**
ದಾವಣಗೆರೆ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಶ್ರೀ ಸಿದ್ಧವೀರಪ್ಪ ಬಡಾವಣೆ, 12ನೇ ಕ್ರಾಸ್, 5ನೇ ಮೇನ್, # 1978/3, ಶ್ರೀನಿಧಿ 30x50 ನಿವೇಶನದಲ್ಲಿ ನಿರ್ಮಿಸಿರುವ 1200 ಚ. ವಿಸ್ತೀರ್ಣ, 2 BHK ಮನೆ ಮಾರಾಟಕ್ಕಿದೆ.
ಶ್ರೀ ಡಿ. ವೆಂಕಟೇಶ್ ರಾವ್
95357 81770

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**

ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.
ದಾವಣಗೆರೆ : 2 & 3 ರಂದು
ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಆಯ್. ದೊಡ್ಡಮನಿ (G.R.No.8969)
ದಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26
ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

**REQUIRED**
FIELD SALES EXECUTIVES
for Leading e-Commerce Company
Indiamart Intermesh Limited
For Davangere Location.
(Fresher's/Experienced)
Age : below 32 yrs.,
Any Graduate/Diploma.
Salary : 15 k to 18 k + Incentive.
Send your CV/whatsapp Location: Davangere.
PRAVEEN - 83174 58939
AFROZ - 9740106740
74116 30994

**ಉತ್ತಮ ಅಡಿಕೆ ಸಸಿಗಳು ಮಾರಾಟಕ್ಕಿವೆ**
ನಮ್ಮಲ್ಲಿ ಉತ್ತಮವಾದ ಅಡಿಕೆ ಸಸಿಗಳು ಮಾರಾಟಕ್ಕಿವೆ.
ಸ್ಥಳ : ದೊಡ್ಡಬಾತಿ
88920 08800

**ಬೋರ್ ವೆಲ್ ಪಾಯಿಂಟ್**
ಅಂತರ್ಜಲ ಸಂಶೋಧನೆ (Ground Water) ಬೋರ್ ವೆಲ್ ಪಾಯಿಂಟ್‌ಗಾಗಿ ಸಂಪರ್ಕಿಸಿ :
ಎಂ.ಟಿ. ಬಸವರಾಜು ಎಂ.ಎಸ್ಸಿ.
ಭೂ-ವಿಜ್ಞಾನಿಗಳು.
94492 02888, 86608 03388

**ಸೈಟ್‌ಗಳು ಮಾರಾಟಕ್ಕಿವೆ**
ಅಮರಾವತಿಯ ಕೆಹೆಚ್‌ಬಿ ಪಕ್ಕದ ಹೆಚ್‌ಎಂಆರ್ ಬಡಾವಣೆಯ ದೊಗ್ಗಳ್ಳಿ-ಹರಿಹರ ರಸ್ತೆಯ ಪಕ್ಕದಲ್ಲಿ ಸೈಟುಗಳು ಮಾರಾಟಕ್ಕಿವೆ.
ಸಂಪರ್ಕಿಸಿ :
98809 33630

**HOUSE FOR SALE**
30x60 South Facing, 4 BHK Duplex House, Taralabalu Badavane, Contact :
99028 78035, 98440 56943
(Only Vegetarians )

**WANTED**
Field Executive (Male) for Davanagere Branch.
Attractive Salary, Fuel + Incentives, ESI and EPF facility.
Qualification required - Minimum 12 Pass.
*Safaj Security & Service*
97437 56647, 97311 55583

# ಕಾಳು ಕಟ್ಟುವ ಹಂತದ ಭತ್ತಕ್ಕೆ ತಿಂಗಳಾಂತ್ಯದವರೆಗೆ ನೀರು ಹರಿಸಲು ಜಿಲ್ಲಾ ಬಿಜೆಪಿ ರೈತ ಮೋರ್ಚಾ ಒತ್ತಾಯ



ದಾವಣಗೆರೆ, ನ.22- ಜಿಲ್ಲೆಯಲ್ಲಿ ಸು. 1.4 ಲಕ್ಷ ಎಕರೆಯಲ್ಲಿ ಭತ್ತ ಬೆಳೆದಿದ್ದು, ಈಗಾಗಲೇ ಶೇ. 20ರಷ್ಟು ಕೊಯ್ಲಿಗೆ ಬಂದಿದೆ. ಶೇಕಡ 50 ರಷ್ಟು ಭತ್ತದ ಬೆಳೆ ಇನ್ನು ಎಂಟತ್ತು ದಿನಗಳಲ್ಲಿ ಕೊಯ್ಲಿಗೆ ಬರುತ್ತದೆ. ಇನ್ನುಳಿದ ಶೇಕಡ 30 ರಷ್ಟು ಭತ್ತದ ಬೆಳೆ ಕಾಳು ಕಟ್ಟುವ ಹಂತದಲ್ಲಿದೆ. ಕಾಳು ಕಟ್ಟುವ ಹಂತದಲ್ಲಿರುವುದರಿಂದ ಭತ್ತಕ್ಕೆ ನಿತ್ಯ ನೀರು ಬೇಕು. ಇಲ್ಲವಾದರೆ ಕಾಳು ಸಂಪೂರ್ಣ ಜಳ್ಳಾಗುತ್ತದೆ. ಹಾಗಾಗಿ ಕೈಯಿಗೆ ಬಂದ ತುತ್ತು ಬಾಯಿಗೆ ಬರದಂತೆ ಆಗುತ್ತದೆ. ಆದ್ದರಿಂದ ಈ ತಿಂಗಳ ಅಂತ್ಯದವರೆಗೆ ಭದ್ರಾ ನೀರು ಹರಿಸಬೇಕು ಬಿಜೆಪಿ ಜಿಲ್ಲಾ ರೈತ ಮೋರ್ಚಾ ಒತ್ತಾಯಿಸಿದೆ.

ಈಗಾಗಲೇ ಭತ್ತದ ಪೈರು ಕೊಯ್ಲಿಗೆ ಬಂದಿರುವುದನ್ನು ಬಿಟ್ಟು ಕಾಳು ಕಟ್ಟುವ ಅಂತದಲ್ಲಿರುವ ಪೈರಿಗೆ ಮಾತ್ರ ನೀರು ಒದಗಿಸುವ ಕಾರ್ಯವಾಗಬೇಕು. ಪ್ರಸ್ತುತ ಈಗಾಗಲೇ ಕೊಯ್ಲಿಗೆ ಬಂದಿರುವ ಭಾಗಕ್ಕೂ ನೀರು ನಿರಂತರವಾಗಿ ಹರಿಸಲಾಗುತ್ತಿದೆ. ಇದರಿಂದ ನೀರು ವ್ಯರ್ಥವಾಗಿ ಹರಿದು ಪೋಲಾಗುತ್ತಿದೆ. ಆದ್ದರಿಂದ ನೀರಾವರಿ ಇಲಾಖೆ ಅಧಿಕಾರಿಗಳು ನೀರು ನಿರ್ವಹಣೆಯನ್ನು ಸಮರ್ಪಕವಾಗಿ ನಿರ್ವಹಿಸಬೇಕು. ನೀರಿನ ಅವಶ್ಯಕತೆ ಇರುವ ಭಾಗಕ್ಕೆ ಮಾತ್ರ ನೀರು ಹರಿಸಬೇಕು. ಇಲ್ಲವಾದರೆ ನೀರು ವ್ಯರ್ಥವಾಗಿ ಹರಿದು ಪೋಲಾಗುತ್ತದೆ.

ಇಂದು ರಾತ್ರಿ ನೀರು ನಿಲುಗಡೆ ಮಾಡಲಾಗುವುದು ಎಂದು ಭದ್ರಾ ನೀರಾವರಿ ಸಲಹಾ ಸಮಿತಿ ಕಾರ್ಯದರ್ಶಿ ಸುಜಾತ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಇಂದಿನಿಂದಲೇ ನೀರು ನಿಲುಗಡೆ ಮಾಡಿದ್ರೆ ಕಾಳು ಕಟ್ಟುವ ಹಂತದಲ್ಲಿರುವ ಶೇಕಡ 30ರಷ್ಟು ಭತ್ತದ ಬೆಳೆ ಹಾನಿಯಾಗುತ್ತದೆ. ಆದ್ದರಿಂದ ಇಂದು ನೀರು ನಿಲುಗಡೆ ಮಾಡದೆ, ಈ ತಿಂಗಳ ಅಂತ್ಯದವರೆಗೆ ಕಾಳು ಕಟ್ಟುವ ಅಂತದಲ್ಲಿರುವ ಶೇಕಡ 30 ರಷ್ಟು ಭತ್ತದ ಬೆಳೆಗೆ ಮಾತ್ರ ನೀರು ಹರಿಸಲು ಕ್ರಮ ವಹಿಸಬೇಕು ಎಂದು ಕರ್ನಾಟಕ ನೀರಾವರಿ ನಿಗಮದ ಅಧಿಕಾರಿಗಳಿಗೆ ಆದೇಶಿಸಬೇಕು ಎಂದು ಕೋರಿದೆ.

ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸುವಾಗ ಜಿಲ್ಲಾ ಬಿಜೆಪಿ ರೈತ ಮೋರ್ಚಾ ಅಧ್ಯಕ್ಷ ಲೋಕಿಕೆರೆ ನಾಗರಾಜ್, ರಾಜ್ಯ ಬಿಜೆಪಿ ರೈತ ಮೋರ್ಚಾ ಕಾರ್ಯಕಾರಿಣಿ ಸದಸ್ಯ ಕೊಳೇನಹಳ್ಳಿ ಬಿ. ಎಂ ಸತೀಶ್, ರೈತ ಮುಖಂಡರಾದ ಆಲೂರು ನಿಂಗರಾಜ್, ಅಣಜಿ ಗುಡ್ಡೇಶ್, ಕಕ್ಕರಗೊಳ್ಳ ಕಲ್ಲಿಂಗಪ್ಪ, ಕೆ. ಎಸ್. ಮೋಹನ್, ಕೊಂಡಜ್ಜಿ ಪರಮೇಶ್ವರಪ್ಪ ಮುದೇಗೌಡ್ರ ಮುಂತಾದವರು ಉಪಸ್ಥಿತರಿದ್ದರು .

ಮನವಿ ಸ್ವೀಕರಿಸಿದ ಜಿಲ್ಲಾಧಿಕಾರಿ ಡಾ. ವೆಂಕಟೇಶ್, ಇನ್ನೆರಡು ದಿನ ನೀರು ಹರಿಸಬೇಕು ಎಂದು ಕರ್ನಾಟಕ ನೀರಾವರಿ ನಿಗಮದ ಅಧಿಕಾರಿಗಳೊಂದಿಗೆ ಮತ್ತು ಅವಶ್ಯಕತೆ ಕಂಡುಬಂದರೆ, ಐಸಿಸಿ ಅಧ್ಯಕ್ಷ ಸಚಿವ ಮಧು ಬಂಗಾರಪ್ಪನವರೊಂದಿಗೆ ಮಾತನಾಡುವುದಾಗಿ ಭರವಸೆ ನೀಡಿದರು ಎಂದು ಬಿಜೆಪಿ ಮುಖಂಡರು ತಿಳಿಸಿದ್ದಾರೆ.

## ಅಂಟಾರ್ಟಿಕದಲ್ಲಿ ಮೂರು ವರ್ಷಗಳಲ್ಲೇ ಬೃಹತ್ ಓಝೋನ್ ರಂಧ್ರ

ನವದೆಹಲಿ, ನ. 22 - ಅಂಟಾರ್ಟಿಕದ ಓಝೋನ್ ರಂಧ್ರ ಕಳೆದ ಮೂರು ವರ್ಷಗಳಲ್ಲಿ ದಾಖಲೆ ಪ್ರಮಾಣದಲ್ಲಿ ದೊಡ್ಡದಾಗಿದೆ ಎಂದು ಅಧ್ಯಯನವೊಂದು ತಿಳಿಸಿದೆ.ಅಂಟಾರ್ಟಿಕ ವಲಯದ ಓಝೋನ್ ರಂಧ್ರ ಬೃಹತ್ ಹಾಗೂ ಸುದೀರ್ಘ ಕಾಲ ಉಳಿದುಕೊಂಡಿದೆ. ಇದಕ್ಕೆ ಸಿ.ಎಫ್.ಸಿ. ಅನಿಲಗಳಷ್ಟೇ ಅಲ್ಲದೇ ಹಲವು ಕಾರಣಗಳಿವೆ ಎಂದು ನೇಚರ್ ಕಮ್ಯುನಿಕೇಷನ್ಸ್ ನಿಯತಕಾಲಿಕದಲ್ಲಿ ಪ್ರಕಟಿಸಲಾದ ಅಧ್ಯಯನ ತಿಳಿಸಿದೆ. ನ್ಯೂಜಿಲ್ಯಾಂಡ್‌ನ ಒಟಾಗೋ ವಿಶ್ವವಿದ್ಯಾನಿಲಯದ ತಂಡ ಈ ಬಗ್ಗೆ ಅಧ್ಯಯನ ನಡೆಸಿ ವರದಿ ರೂಪಿಸಿದೆ.

# ಬರ ಪರಿಹಾರದ ಹಣ ಬಿಡುಗಡೆಗೆ ಶಾಸಕ ನೇಮಿರಾಜ್ ನಾಯ್ಕ್ ಒತ್ತಾಯ



ಹರಪನಹಳ್ಳಿ, ನ. 22- ರಾಜ್ಯದಲ್ಲಿ ಬರಗಾಲ ತೀವ್ರವಾಗಿದ್ದು, ಶೀಘ್ರದಲ್ಲೇ ರೈತರಿಗೆ ಬರ ಪರಿಹಾರದ ಹಣ ಬಿಡುಗಡೆ ಮಾಡಬೇಕೆಂದು ಹಗರಿಬೊಮ್ಮನಹಳ್ಳಿ ಜೆಡಿಎಸ್ ಶಾಸಕ ಕೆ.ನೇಮಿರಾಜ್ ನಾಯ್ಕ್ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ತಾಲ್ಲೂಕಿನ ಮತ್ತಿಹಳ್ಳಿ ಕ್ರಾಸ್ ಬಳಿ ಬರ ಸಮೀಕ್ಷೆ ಪ್ರವಾಸದ ನಿಮಿತ್ತ ಬೊಮ್ಮನಗೌಡರ ಹೊಲದಲ್ಲಿ ಬೆಳೆ ವೀಕ್ಷಿಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇಂದು ರಾಜ್ಯ ಸರ್ಕಾರ ಅಧಿಕಾರಿಗಳ ವರ್ಗಾವಣೆ ದಂಧೆಯಲ್ಲೇ ಕಾಲಹರಣ ಮಾಡುತ್ತಿದೆ ಎಂದು ಲೇವಡಿ ಮಾಡಿದರು.

ಬ್ಯಾಂಕಿನವರು ರೈತರಿಗೆ ಸಾಲ ಮರುಪಾವತಿ ಮಾಡುವಂತೆ, ಕಿರುಕುಳ ಕೊಡುತ್ತಿದ್ದಾರೆ. ಹಾಗಾಗಿ ಸರ್ಕಾರ ಕೂಡಲೇ ಹಣ ಬಿಡುಗಡೆಗೊಳಿಸಿ, ರೈತರ ಕಷ್ಟಕ್ಕೆ ಧಾವಿಸಿ ರೈತರ ಬೆನ್ನಿಗೆ ನಿಲ್ಲಬೇಕು. ಇಲ್ಲವಾದಲ್ಲಿ ನಮ್ಮ ವಿಪಕ್ಷ ನಾಯಕ ಹೆಚ್. ಡಿ.ಕುಮಾರಸ್ವಾಮಿ ಅವರು ರೈತರೊಂದಿಗೆ ಸದನದಲ್ಲಿ ಧರಣಿ ಮಾಡುತ್ತಾರೆ. ನಾವು ರೈತರ ಜೊತೆ ಬೀದಿಯಲ್ಲಿ ಹೋರಾಟ ಮಾಡುತ್ತೇವೆ ಎಂದು ಸರ್ಕಾರಕ್ಕೆ ಎಚ್ಚರಿಕೆ ನೀಡಿದರು.

ಧರ್ಮ ಪರಿಷತ್ ಕಾರ್ಯದರ್ಶಿ ಕೂಲಹಳ್ಳಿಯ ಪಟ್ಟದ ಚಿನ್ಮಯಸ್ವಾಮೀಜಿ ಮಾತನಾಡಿ, ಈ ವರ್ಷ ಭಾರೀ ಪ್ರಮಾಣದಲ್ಲಿ ಬೆಳೆ ನಷ್ಟವಾಗಿದೆ. ಕುಡಿಯಲು ನೀರಿಗೆ ಪರದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಸರ್ಕಾರ ಈ ಕೂಡಲೇ ಬೆಳೆ ಬರ ಪರಿಹಾರ ನೀಡಬೇಕು. ಜನ ಜಾನುವಾರುಗಳಿಗೆ ಕುಡಿಯುವ ನೀರಿನ

**ಹರಪನಹಳ್ಳಿ**

ವ್ಯವಸ್ಥೆ ಕಲ್ಪಿಸಬೇಕು ಎಂದು ಒತ್ತಾಯಿಸಿದರು.

ಈ ವೇಳೆ ಧರ್ಮಪರಿಷತ್ ಅಧ್ಯಕ್ಷರಾದ ನಂದಿಪುರದ ಮಹೇಶ್ವರ ಸ್ವಾಮೀಜಿ, ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ, ಚಾನುಕೋಟೆ ಸ್ವಾಮೀಜಿ, ಬೆಣ್ಣೆಹಳ್ಳಿ ಸ್ವಾಮೀಜಿ, ಪಂಚಾಕ್ಷರ ಸ್ವಾಮೀಜಿ, ಪ್ರಶಾಂತ ಶಿವಾಚಾರ್ಯ ಸ್ವಾಮೀಜಿ, ಕಲ್ಯಾಣ ಸ್ವಾಮೀಜಿ, ಮುಖಂಡ ಎಂ.ಎಂ.ಜೆ. ಹರ್ಷವರ್ಧನ, ಜೆಡಿಎಸ್ ಜಿಲ್ಲಾಧ್ಯಕ್ಷ ಕೆ. ಕೊಟ್ರೇಶ್, ಹರಪನಹಳ್ಳಿ ತಾಲೂಕು ಜೆಡಿಎಸ್ ಅಧ್ಯಕ್ಷ ಶಿರಹಟ್ಟಿ ದಂಡ್ಯೆಪ್ಪ, ಮಲ್ಲಿಕಾರ್ಜುನ, ಸಿದ್ಧಣ್ಣ, ಅಂಬಣ್ಣ ನಾಯ್ಕ್, ಬೆಣ್ಣೆಹಳ್ಳಿ ಜಾಕೀರ್ ಸಾಬ್, ಶಿರಹಟ್ಟಿ ವಿಜಯ್ ಕುಮಾರ್, ಕರಿಬಸವನಗೌಡ ಸೇರಿದಂತೆ ಮತ್ತಿತರರಿದ್ದರು.

## ಕರ್ತವ್ಯ ನಿಷ್ಠೆ ಮೆರೆದ ವೈದ್ಯ



ದಾವಣಗೆರೆ, ನ.22- ಬಿಳಿಚೋಡು - ಜಗಳೂರು ಮಾರ್ಗ ಮಧ್ಯದ ದೇವಿಕೆರೆಯ ಬಳಿ ನಡೆದ ರಸ್ತೆ ಅಪಘಾತದಲ್ಲಿ ಗಾಯಗೊಂಡಿದ್ದ ವ್ಯಕ್ತಿಗೆ ಆರೈಕೆ ಆಸ್ಪತ್ರೆಯ ಮುಖ್ಯಸ್ಥ ಡಾ. ರವಿಕುಮಾರ್ ಟಿ.ಜಿ ಅವರು ಸೂಕ್ತ ಸಮಯದಲ್ಲಿ ಸ್ಪಂದಿಸಿ, ವೈದ್ಯ ವೃತ್ತಿಯ ಮಹತ್ವವನ್ನು ಎತ್ತಿಹಿಡಿದಿದ್ದಾರೆ.

**ಏನಿದು ಘಟನೆ:** ಮೊನ್ನೆ ಜಗಳೂರಿನ ಕಲ್ಲಯ್ಯ ಆಸ್ಪತ್ರೆಯಲ್ಲಿ ರೋಗಿಗಳನ್ನು ಉಪಚರಿಸಿ ಅವರು ತಮ್ಮ ಕಾರಿನಲ್ಲಿ ವಾಪಸ್ಸಾಗುತ್ತಿದ್ದರು. ಈ ವೇಳೆ, ದೇವಿಕೆರೆ ಕ್ರಾಸ್ ಬಳಿ ಬರುವಾಗ ಬೈಕ್ ಸವಾರನೊಬ್ಬ ಆಯತಪ್ಪಿ ಬಿದ್ದು ರಸ್ತೆ ಬದಿಯಲ್ಲಿ ನರಳುತ್ತಿದ್ದದ್ದು ಕಂಡು ಬಂದಿದೆ. ಕೂಡಲೇ ತಮ್ಮ ಕಾರು ನಿಲ್ಲಿಸಿದ ಡಾ.ರವಿಕುಮಾರ್, ಗಾಯಾಳುವಿಗೆ ಪ್ರಥಮ ಚಿಕಿತ್ಸೆ ನೀಡಿದ್ದಾರೆ. ವ್ಯಕ್ತಿಯ ಬಿಪಿ, ಪಲ್ಸ್, ಎದೆಬಡಿತ ಎಲ್ಲವನ್ನೂ ಪರೀಕ್ಷಿಸಿ, ಹೆಚ್ಚಿನ ಅಪಾಯವಾಗದಂತೆ ಚಿಕಿತ್ಸೆ ನೀಡಿದ್ದು, ವ್ಯಕ್ತಿ ಪ್ರಾಣಾಪಾಯದಿಂದ ಪಾರಾಗಿದ್ದಾನೆ. ಡಾ. ರವಿಕುಮಾರ್ ಅವರ ಕರ್ತವ್ಯ ಪ್ರಜ್ಞೆ ಮತ್ತು ಸಮಯ ಪ್ರಜ್ಞೆಗೆ ಸಾಮಾಜಿಕ ಜಾಲತಾಣಗಳೂ ಸೇರಿದಂತೆ, ಹಲವೆಡೆ ಮೆಚ್ಚುಗೆ ವ್ಯಕ್ತವಾಗಿದೆ.

**ಹಿಂದೊಮ್ಮೆ ಹೀಗಾಗಿತ್ತು:** ದಾವಣಗೆರೆ ನಗರದ ಎವಿಕೆ ಕಾಲೇಜು ರಸ್ತೆಯಲ್ಲಿ ಡಾ. ರವಿಕುಮಾರ್ ಅವರು ತಮ್ಮ ಕಾರಿನಲ್ಲಿ ಬರುವಾಗ, ರಸ್ತೆ ಬದಿಯಲ್ಲಿ ನಿಂತಿದ್ದ ವಿದ್ಯಾರ್ಥಿನಿಯೊಬ್ಬರು ಬಿಸಿಲಿನ ಬೇಗೆಯಿಂದ ತಲೆಸುತ್ತು ಬಂದು ಅಸ್ವಸ್ಥರಾಗಿ ಬಿದ್ದಿದ್ದರು. ಇದನ್ನು ಕಾರಿನಿಂದಲೇ ಗಮನಿಸಿದ ಡಾ. ರವಿ, ಕೂಡಲೇ ವಿದ್ಯಾರ್ಥಿನಿಯ ಬಳಿಗೆ ತೆರಳಿ, ಆಕೆಗೆ ಪ್ರಥಮ ಚಿಕಿತ್ಸೆ ನೀಡಿದ್ದರು. ಸುಡು ಬಿಸಿಲಿನಲ್ಲಿ ವಿದ್ಯಾರ್ಥಿನಿ ಬಿದ್ದಿದ್ದರಿಂದ ಸ್ಥಳದಲ್ಲಿ ಕೆಲ ಕಾಲ ಭಯ ಮೂಡಿತ್ತು. ಆದರೆ, ಡಾ. ರವಿ ಅವರ ತ್ವರಿತ ವೈದ್ಯಕೀಯ ಉಪಚಾರದಿಂದ ವಿದ್ಯಾರ್ಥಿನಿಯು ಹತ್ತು ನಿಮಿಷಗಳಲ್ಲಿ ಚೇತರಿಸಿಕೊಂಡಿದ್ದರು.

## ವಾಜಪೇಯಿ ಹುಟ್ಟುಹಬ್ಬ ಆಚರಣೆಗೆ ನಿರ್ಧಾರ



ದಾವಣಗೆರೆ, ನ.22- ಮಾಜಿ ಪ್ರಧಾನಮಂತ್ರಿ ಅಟಲ್ ಬಿಹಾರಿ ವಾಜಪೇಯಿಯವರ ಹುಟ್ಟುಹಬ್ಬವನ್ನು ಬರುವ ಡಿಸೆಂಬರ್ ಮಾಹೆಯಲ್ಲಿ ಅದ್ದೂರಿಯಾಗಿ ಆಚರಿಸಲು ಇಂದಿಲ್ಲಿ ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ನಡೆದ ಜಿಲ್ಲಾ ಬಿಜೆಪಿ ಮೂಲ ಕಾರ್ಯಕರ್ತರ ಸಭೆಯಲ್ಲಿ ತೀರ್ಮಾನಿಸಲಾಯಿತು.

ಸಭೆಯ ಅಧ್ಯಕ್ಷತೆಯನ್ನು ಬಿಜೆಪಿ ಹಿರಿಯರಾದ ಬಿ.ಎಂ. ಷಣ್ಮುಖಯ್ಯ ಆವರಗೊಳ್ಳ ವಹಿಸಿದ್ದರು. ಇದೇ ಸಂದರ್ಭದಲ್ಲಿ ಜಿಲ್ಲೆಯ ಮೂಲ ಬಿಜೆಪಿ ಕಾರ್ಯಕರ್ತರು ಹಾಗೂ ಅಟಲ್ ಬಿಹಾರಿ ವಾಜಪೇಯಿ ಅಭಿಮಾನಿ ಬಳಗದ ವತಿಯಿಂದ ಜಿಲ್ಲಾ ಸಮಿತಿಯನ್ನು ರಚಿಸಲಾಯಿತು.

ಗೌರವ ಅಧ್ಯಕ್ಷರಾಗಿ ಬಿ.ಎಂ. ಷಣ್ಮುಖಯ್ಯ ಆವರಗೊಳ್ಳ, ಜಿಲ್ಲಾ ಅಧ್ಯಕ್ಷರಾಗಿ ಎಂ.ಪಿ. ಕೃಷ್ಣಮೂರ್ತಿ ಪವಾರ್, ಜಿಲ್ಲಾ ಪ್ರಧಾನ ಕಾರ್ಯದರ್ಶಿಯಾಗಿ ಹೆಚ್.ಎಸ್. ಲಿಂಗರಾಜು ಅವರುಗಳು ಆಯ್ಕೆಯಾದರು.

ಪ್ರಧಾನ ಕಾರ್ಯದರ್ಶಿಗಳಾಗಿ ಚಂದ್ರಾನಾಯಕ್ ಜಗಳೂರು, ಶಿವಕುಮಾರಸ್ವಾಮಿ ಜಗಳೂರು, ಉಪಾಧ್ಯಕ್ಷರುಗಳಾಗಿ ಆರ್. ಪ್ರತಾಪ್ (ದಕ್ಷಿಣ), ಶಂಕರ್ ಸಾಲದ್ವಾ ಹರಿಹರ, ಕೆ. ಶಿವಶಂಕರ್, ಬಸವಂತಪ್ಪ ನರಗನಹಳ್ಳಿ, ಜಿ. ಮರುಳಸಿದ್ದಪ್ಪ ಮಂಡಲೂರು ಇವರುಗಳು ಆಯ್ಕೆಯಾದರು.

ಸಂಘಟನಾ ಪ್ರಧಾನ ಕಾರ್ಯದರ್ಶಿಗಳಾಗಿ ವೈ.ಬಿ. ಸಿದ್ದೇಶ್ ವಡ್ಡಿನಹಳ್ಳಿ, ಸಂತೋಷ್ ಪೈಲ್ವಾನ್, ಗುಬ್ಬಿ ಬಸವರಾಜ್, ಸಹ ಸಂಘಟನಾ ಕಾರ್ಯದರ್ಶಿಗಳಾಗಿ ಕೆ.ಟಿ. ಕಲ್ಲೇಶ್, ಹಿರೇಅರಕೆರೆ ಹೆಚ್. ಎಂ. ನಾಗರಾಜ್, ಜಿಲ್ಲಾ ವಕ್ತಾರರಾಗಿ ಮಾಲತೇಶ್ ಗುಪ್ತಾ, ಕೋಶಾಧ್ಯಕ್ಷರಾಗಿ ಗೋಪಾಲ್‌ರಾವ್ ಸಾವಂತ್ ಆಯ್ಕೆಯಾಗಿದ್ದಾರೆ. ಜಿಲ್ಲಾ ಮಹಿಳಾ ಘಟಕದ ಅಧ್ಯಕ್ಷರನ್ನಾಗಿ ಶ್ರೀಮತಿ ಸರೋಜಮ್ಮ ದೀಕ್ಷಿತ್ ಅವರನ್ನು ಆಯ್ಕೆ ಮಾಡಲಾಯಿತು.

## ನಗರದಲ್ಲಿ ಇಂದು ವಿಕಲಚೇತನರಿಗೆ ಕ್ರೀಡಾ ಸ್ಪರ್ಧೆ

ವಿಶ್ವ ವಿಕಲಚೇತನರಿಗಾಗಿ ಕ್ರೀಡಾ ಸ್ಪರ್ಧೆಗಳ ಉದ್ಘಾಟನಾ ಸಮಾರಂಭವನ್ನು ಮೋತಿ ವೀರಪ್ಪ ಸರ್ಕಾರಿ ಪದವಿಪೂರ್ವ ಕಾಲೇಜು ಮೈದಾನದಲ್ಲಿ ಇಂದು ಬೆಳಿಗ್ಗೆ 11 ಗಂಟೆಗೆ ಆಯೋಜಿಸಲಾಗಿದೆ.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಜಿಲ್ಲಾ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ ಮತ್ತು ವಿಕಲಚೇತನರ ಶ್ರೇಯೋಭಿವೃದ್ಧಿಗಾಗಿ ಶ್ರಮಿಸುತ್ತಿರುವ ಸ್ವಯಂ ಸೇವಾ ಸಂಘ-ಸಂಸ್ಥೆಗಳು ಸಹಯೋಗದಲ್ಲಿ ಆಯೋಜಿಸಿರುವ ಕಾರ್ಯಕ್ರಮವನ್ನು ಹಿರಿಯ ಸಿವಿಲ್ ನ್ಯಾಯಾಧೀಶರಾದ ಮಹಾವೀರ ಮ. ಕರೆಣ್ಣವರ ಉದ್ಘಾಟಿಸುವರು. ಅಪರ ಜಿಲ್ಲಾಧಿಕಾರಿ ಪಿ.ಎನ್. ಲೋಕೇಶ್ ಅಧ್ಯಕ್ಷತೆ ವಹಿಸುವರು.

ಮುಖ್ಯ ಅತಿಥಿಗಳಾಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ವಾಸಂತಿ ಉಪ್ಪಾರ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ಕೆ.ಆರ್. ಜಯಲಕ್ಷ್ಮಿ ಬಾಯಿ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿ ಮಂಜುಳ.ಎಂ.ಪಿ, ಮೋತಿ ವೀರಪ್ಪ ಕಾಲೇಜಿನ ಪ್ರಾಂಶುಪಾಲ ಪಂಚಾಕ್ಷರಪ್ಪ ಎಸ್, ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಹಾಗೂ ವಿಶ್ವ ವಿಕಲಚೇತನರ ದಿನಾಚರಣೆ ಸಮಿತಿಯ ಸದಸ್ಯ ಕಾರ್ಯದರ್ಶಿ ಡಾ.ಕೆ.ಕೆ ಪ್ರಕಾಶ್ ಭಾಗವಹಿಸಲಿದ್ದಾರೆ.

## ಕೆನಡಾದ ನಾಗರಿಕರಿಗೆ ಎಲೆಕ್ಟ್ರಾನಿಕ್ ವೀಸಾ ಪುನರಾರಂಭ

ನವದೆಹಲಿ, ನ. 22 – ಕೆನಡಾದ ನಾಗರಿಕರಿಗೆ ಎಲೆಕ್ಟ್ರಾನಿಕ್ ವೀಸಾ ನೀಡುವುದನ್ನು ಪುನರಾರಂಭಿಸಲಾಗಿದೆ. ಕೆನಡಾದ ಜೊತೆಗಿನ ಸಂಬಂಧ ಹದಗೆಟ್ಟ ನಂತರ ಎಲೆಕ್ಟ್ರಾನಿಕ್ ವೀಸಾ ನೀಡುವುದನ್ನು ನಿಲ್ಲಿಸಲಾಗಿತ್ತು. ಖಲಿಸ್ತಾನದ ಪ್ರತ್ಯೇಕತಾವಾದಿ ಹರ್‌ದೀಪ್ ಸಿಂಗ್ ನಿಜ್ಜರ್ ಹತ್ಯೆ ಹಿಂದೆ ಭಾರತದ ಏಜೆಂಟರ ಕೈವಾಡ ಇದೆ ಎಂದು ಕೆನಡಾ ಆರೋಪಿಸಿದ ನಂತರ ಉಭಯ ದೇಶಗಳ ನಡುವಿನ ಸಂಬಂಧ ಹದಗೆಟ್ಟಿತ್ತು.

## ಬೈಕ್ ಅಡ್ಡಗಟ್ಟಿ ಲೂಟಿ

ದಾವಣಗೆರೆ, ನ.22- ಯುವಕರ ಬೈಕ್ ಅಡ್ಡಗಟ್ಟಿ ಬೆದರಿಸಿ ಮೊಬೈಲ್ ಫೋನ್ ಹಾಗೂ ನಗದು ಕಿತ್ತುಕೊಂಡ ಘಟನೆ ಹದಡಿ ಮೇಲ್ಸೇತುವೆ ಬಳಿ ಸೋಮವಾರ ರಾತ್ರಿ 1.30ರ ಸುಮಾರಿಗೆ ನಡೆದಿದೆ.

ಚೇತನ್ (33) ಹಾಗೂ ಸ್ನೇಹಿತ ಗಣೇಶ್ ಇವರು ಸುಬ್ರಮಣ್ಯ ನಗರದಲ್ಲಿರುವ ಶ್ರೀ ವಿನಾಯಕ ರೈಸ್ ಮಿಲ್‌ನಲ್ಲಿ ಕೆಲಸ ಮಾಡುತ್ತಿದ್ದು, ರಾತ್ರಿ ಕೆಎಸ್ಸಾರ್ಟಿಸಿ ಬಸ್ ನಿಲ್ದಾಣದ ಬಳಿ ಊಟ ಮಾಡಿಕೊಂಡು ರೈಸ್‌ಮಿಲ್ ಕಡೆ ಹೋಗುವಾಗ ಹದಡಿ ಬ್ರಿಡ್ಜ್ ಬಳಿ ಎರಡು ಬೈಕ್‌ಗಳಲ್ಲಿ ಐವರು ಹಿಂಬಾಲಿಸಿಕೊಂಡು ಬಂದು ಅಡ್ಡಗಟ್ಟಿ ಹಲ್ಲೆ ನಡೆಸಿದ್ದಾರೆ ಎಂದು ದೂರಲಾಗಿದೆ.

ಮೊಬೈಲ್, 1 ಸಾವಿರ ರೂ. ನಗದು ಹಣ ಹಾಗೂ ಬೈಕ್ ಕೀ ಕಿತ್ತುಕೊಂಡು ಬೆದರಿಸಿ ಹೋಗಿದ್ದಾರೆ. ಈ ಕುರಿತು ಚೇತನ್ ವಿದ್ಯಾನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

## ತಹಶೀಲ್ದಾರ್ ವರ್ತನೆ : ಕನಕ ಜಯಂತಿಗೆ ರಾಣೇಬೆನ್ನೂರು ಕುರುಬರ ಬಹಿಷ್ಕಾರ !



ರಾಣೇಬೆನ್ನೂರು, ನ.22- ಪ್ರತಿ ವರ್ಷದಂತೆ ಕನಕದಾಸರ ಜಯಂತಿ ಆಚರಣೆ ಮಾಡಬೇಕು ಎನ್ನುವ ಕುರುಬ ಸಮಾಜದ ಮನವಿಯನ್ನು ಅಲಕ್ಷಿಸಿ, ತಮ್ಮ ಕಛೇರಿಯಲ್ಲಿ ಫೋಟೋ ಇಟ್ಟು ಮಾಲಾರ್ಪಣೆಯೊಂದಿಗೆ ಕನಕ ಜಯಂತಿ ಆಚರಿಸುವುದಾಗಿ ಹೇಳಿದ ತಹಶೀಲ್ದಾರ್ ಹನುಮಂತಪ್ಪ ಶಿರಹಟ್ಟಿ ಅವರ ವರ್ತನೆಯನ್ನು ಖಂಡಿಸಿ, ಇಲ್ಲಿನ ಕುರುಬ ಸಮಾಜ ಆ ಜಯಂತಿಯಲ್ಲಿ ಪಾಲ್ಗೊಳ್ಳುವುದಿಲ್ಲ ಎಂದು ಸಮಾಜದ ಅಧ್ಯಕ್ಷ ಷಣ್ಮುಖಪ್ಪ ಕಂಬಳಿ ಇಂದು ಸುದ್ದಿ ಗೋಷ್ಠಿಯಲ್ಲಿ ತಿಳಿಸಿದರು.

ಪ್ರತಿ ವರ್ಷದಂತೆ ಸರ್ಕಾರದ ಎಲ್ಲಾ ಇಲಾಖೆ ಹಾಗೂ ಕುರುಬ ಸಮಾಜ ಒಂದಾಗಿ ನಗರಸಭೆ ಕ್ರೀಡಾಂಗಣದಲ್ಲಿ ಕನಕ ಜಯಂತಿ ಆಚರಿಸಬೇಕು ಎಂದು ನಿನ್ನೆ ತಹಶೀಲ್ದಾರ್ ಅವರು ಕರೆದಿದ್ದ ಜಯಂತಿಯ ಪೂರ್ವ ಬಾವಿ ಸಭೆಯಲ್ಲಿ ಪ್ರಸ್ತಾಪಿಸಿದ ಸಮಾಜದ ಅಹವಾಲನ್ನು ಅಲಕ್ಷಿಸಿದ ಬಗ್ಗೆ ಸಮಾಜ ತೀವ್ರ ಅಸಮಾಧಾನ ಹೊಂದಿದ್ದು, ಈ ಬಗ್ಗೆ ಶಾಸಕ, ಸಚಿವರ ಗಮನಕ್ಕೆ ತರುವುದಾಗಿ ಷಣ್ಮುಖಪ್ಪ ತಿಳಿಸಿದರು.

ಗೋಷ್ಠಿಯಲ್ಲಿ ಉಣ್ಣೆ ಮಿಲ್ಲಿನ ಅಧ್ಯಕ್ಷ ಸಿದ್ದಣ್ಣ ಅಂಬ್ಲಿ, ರವಿ ಹುಲಗಮ್ಮನವರ, ಸಿದ್ದಪ್ಪ ಬಾಗಲರ, ಮಾಲತೇಶ ದೇವರಗುಡ್ಡ ಆನಂದ ಹುಲಬನ್ನಿ, ಮೃತ್ಯುಂಜಯ ಗುದಗೇರ ಮತ್ತಿತರರಿದ್ದರು.

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ದೇವರಾಜ ಅರಸು ಬಡಾವಣೆ ಎ, ಬಿ ಮತ್ತು ಸಿ ಬ್ಲಾಕ್, ಕರೂರು ಇಂಡಸ್ಟ್ರಿಯಲ್ ಏರಿಯಾ, ಡಿ.ಸಿ. ಕಛೇರಿ, ಜಿ.ಎಂ.ಐ.ಟಿ., ಶಂಕರ್ ವಿಹಾರ ಬಡಾವಣೆ, ಶಾಂತಿ ನಗರ, ರಶ್ಮಿ, ಹರಿಹರ ರಸ್ತೆ, ವಿಜಯ ನಗರ, ಅಶೋಕ ನಗರ, ಆರ್.ಟಿ.ಓ. ಕಛೇರಿ, ಎಸ್.ಪಿ. ಕಛೇರಿ, ರಿಂಗ್ ರಸ್ತೆ, ಶಿಬಾರ, ಎಸ್.ಎಂ.ಕೆ. ನಗರ ಹಾಗೂ ಚಿತ್ತಾನಹಳ್ಳಿ, ಕಕ್ಕರಗೊಳ್ಳ, ಆವರಗೊಳ್ಳ, ನೀಲಾನಹಳ್ಳಿ, ದೇವರಹಟ್ಟಿ, ದೊಡ್ಡಬಾತಿ, ಹಳೇಬಾತಿ, ನಾರಾಯಣ ಕ್ಯಾಂಪ್, ಯರಗುಂಟೆ, ಕೋಡಿಹಳ್ಳಿ ಗ್ರಾಮಗಳು ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 5 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

## 27 ರಂದು ಹಳೇ ಕುಂದುವಾಡದಲ್ಲಿ ಜಪ-ಹೋಮ-ಹವನ

ದಾವಣಗೆರೆ, ನ.22- ಹಳೆ ಕುಂದುವಾಡದ ಓಂ ಶ್ರೀ ಕರಿಬಸವೇಶ್ವರ ಸ್ವಾಮಿ ಪುಣ್ಯಕ್ಷೇತ್ರದಲ್ಲಿ ಇದೇ ದಿನಾಂಕ 27 ರ ಸೋಮವಾರ ಬೆಳಿಗ್ಗೆ 10 ಗಂಟೆಗೆ ಜಪ-ಹೋಮ-ಹವನ ನಡೆಯಲಿದೆ. ಮಧ್ಯಾಹ್ನ 1 ಗಂಟೆಗೆ ಪೂರ್ಣಾಹುತಿ ನಡೆಯುವುದು. ಅಂದು ಸಂಜೆ 7 ಗಂಟೆಗೆ ಲಕ್ಷ ದೀಪೋತ್ಸವ ಕಾರ್ಯಕ್ರಮ ನಡೆಯಲಿದೆ. ಸಾನ್ನಿಧ್ಯವನ್ನು ಧರ್ಮಾಧಿಕಾರಿ ಜೆ. ರಾಜಣ್ಣ ವಹಿಸುವರು. ಮುಖ್ಯ ಅತಿಥಿಗಳಾಗಿ ಶಾಸಕ ಶಾಮನೂರು ಶಿವಶಂಕರಪ್ಪ, ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಜಿಲ್ಲಾಧಿಕಾರಿ ಡಾ. ಎಂ.ವಿ. ವೆಂಕಟೇಶ್, ಪೊಲೀಸ್ ರಕ್ಷಣಾಧಿಕಾರಿ ಶ್ರೀಮತಿ ಉಮಾ ಪ್ರಶಾಂತ್ ಮತ್ತಿತರರು ಭಾಗವಹಿಸಲಿದ್ದಾರೆ.

# ಜನ ಸೇವೆ ಮಾಡುವುದು ದೇವರ ಸೇವೆ ಮಾಡಿದಷ್ಟೇ ಪುಣ್ಯದ ಕೆಲಸ



ದಾವಣಗೆರೆ, ನ.22- ಸಮಾಜದಲ್ಲಿ ಬಡವರು, ದೀನ ದಲಿತರು, ಶೋಷಿತರು, ಅನಾಥರು, ವಯೋವೃದ್ಧರೂ ಸೇರಿದಂತೆ ಜನ ಸೇವೆಯನ್ನು ಮಾಡುವುದು ಸಾಕ್ಷಾತ್ ದೇವರ ಸೇವೆ ಮಾಡಿದಷ್ಟು ಪುಣ್ಯದ ಕೆಲಸ ಎಂದು ಶಿವಕುಮಾರ್ ಒಡೆಯರ್ ಅಭಿಮತ ವ್ಯಕ್ತಪಡಿಸಿದರು.

ಸಮೀಪದ ತುರ್ಚಘಟ್ಟ ಬಳಿ ಇರುವ ಸಾಧನ ವೃದ್ಧಾಶ್ರಮ ಮತ್ತು ಅನಾಥಾಶ್ರಮದಲ್ಲಿ ಸೋಮವಾರ ಸಂಜೆ ತಮ್ಮ ತಂದೆ ಚನ್ನಯ್ಯ ಒಡೆಯರ್‌ರವರ 16 ನೇ ವರ್ಷದ ಪುಣ್ಯತಿಥಿ ಅಂಗವಾಗಿ ಏರ್ಪಡಿಸಿದ್ದ ಅನ್ನ ಸಂತರ್ಪಣೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಮನುಷ್ಯ ಹುಟ್ಟಿದ ಮೇಲೆ ಸಂಸ್ಕಾರ ಮತ್ತು ಸನ್ನಡತೆಯಿಂದ ಜೀವಿಸಬೇಕು. ಇಂದಿನ ಮಕ್ಕಳು ಆರ್ಥಿಕವಾಗಿ ಉತ್ತಮರಾಗಿದ್ದರೂ, ತಂದೆ-ತಾಯಿಯರನ್ನು ಸಾಕಲು ಹಿಂಜರಿಯುತ್ತಾರೆ ಮತ್ತು ಮನೆಗಳಿಂದ ಹೊರನೂಕುತ್ತಾರೆ. ಇಂದು ತಮ್ಮ ತಂದೆ-ತಾಯಿ ಮಕ್ಕಳನ್ನು ಸಾಕಿ, ಸಲಹಿ, ವಿದ್ಯಾ-ಬುದ್ಧಿ ನೀಡಿದಂತಹ ದೇವರು. ತಾಯಿ - ತಂದೆಯರನ್ನು ತಿರಸ್ಕಾರದಿಂದ ಕಾಣುವುದು ಅತ್ಯಂತ ದುರಂತ ಸನ್ನಿವೇಶ ಎಂದರು.

ಆಶ್ರಮದ ಸಂಸ್ಥಾಪಕರಾದ ಶ್ರೀಮತಿ ಪುಷ್ಪಲತಾ ಮಾತನಾಡಿ, ಸಾಧನ ಆಶ್ರಮ ಪ್ರಾರಂಭ ಮಾಡಿ ಎಂಟು ವರ್ಷ ಕಳೆದಿವೆ. ಸುಮಾರು ಜನ ಅನಾಥರು, ವಯೋವೃದ್ಧರು, ಅನಾರೋಗ್ಯ ಪೀಡಿತರನ್ನು ನಮ್ಮ ಆಶ್ರಮದಲ್ಲಿ ನೋಡಿಕೊಂಡಿದ್ದೇವೆ ಮತ್ತು ಮರಣ ಹೊಂದಿದಲ್ಲಿ ಸಂಸ್ಕಾರ ಮಾಡಿದ್ದೇವೆ. ಪ್ರಸ್ತುತ 65 ಜನರು ಆಶ್ರಮದಲ್ಲಿದ್ದಾರೆ. ಸರ್ಕಾರದಿಂದ ಯಾವುದೇ ಅನುದಾನ ಪಡೆದಿಲ್ಲ ಮತ್ತು ಯಾವ ಅಧಿಕಾರಿಗಳು, ರಾಜಕಾರಣಿಗಳೂ ನಮಗೆ ನೆರವಿನ ಹಸ್ತ ಚಾಚಿಲ್ಲ. ದಾನಿಗಳಿಂದ ಮತ್ತು ನಮ್ಮ ಪ್ರಯತ್ನ ನಡೆಸುತ್ತಿದ್ದೇನೆ ಎಂದರು.

ಇದೇ ವೇಳೆ ಚಿತ್ರದುರ್ಗ ಖಾದಿ ಗ್ರಾಮೋದ್ಯೋಗ ಮಂಡಳಿ ಸದಸ್ಯ ಮಹಾಸ್ವಾಮಿ, ಸಿದ್ದಯ್ಯ ಒಡೆಯರ್, ವಕೀಲ ಚಂದ್ರಶೇಖರ್ ಒಡೆಯರ್, ಯುವ ಕಾಂಗ್ರೆಸ್ ಮುಖಂಡ ಸಂತೋಷ್, ನಿಂಗಪ್ಪ ಮತ್ತಿತರರು ಉಪಸ್ಥಿತರಿದ್ದರು.

## ನಗರದಲ್ಲಿ ಇಂದು ಚಿಂತನೆ - ಸಂವಾದ

ದಾವಣಗೆರೆ : ಕರುಣಾ ಜೀವ ಕಲ್ಯಾಣ ಟ್ರಸ್ಟ್ ವತಿಯಿಂದ ಇಂದು ಚಿಂತನೆ ಮತ್ತು ಸಂವಾದವನ್ನು ನಗರದ ಎಂ.ಸಿ.ಸಿ.'ಬಿ' ಬ್ಲಾಕ್ 3ನೇ ಮುಖ್ಯರಸ್ತೆ, 3ನೇ ಅಡ್ಡರಸ್ತೆ (ಮಾಮಾಸ್ ಜಾಯಿಂಟ್ ರಸ್ತೆ) ಯಲ್ಲಿರುವ ಕರುಣಾ ಜೀವ ಕಲ್ಯಾಣ ಟ್ರಸ್ಟ್‌ನಲ್ಲಿ ಇಂದು ಸಂಜೆ 6 ರಿಂದ 7ರವರೆಗೆ ಏರ್ಪಡಿಸಲಾಗಿದೆ.

ಕಾರ್ಯಕ್ರಮದಲ್ಲಿ 'ಗಾಂಧಿ ಚಿಂತನೆಗಳು' ವಿಷಯ ಕುರಿತು ಜಿಲ್ಲಾ ಸರ್ವೇಕ್ಷಣಾಧಿಕಾರಿಗಳಾದ ಡಾ. ಜಿ.ಡಿ. ರಾಘವನ್ ಚಿಂತನೆ ನಡೆಸುವರು.

ಚಿಂತನೆ ಮತ್ತು ಸಂವಾದದಲ್ಲಿ ಪ್ರೊ. ಎಂ. ಬಸವರಾಜ್, ಎಸ್. ಗುರುಮೂರ್ತಿ, ಆರ್.ಆರ್. ಕುಸಗೂರು, ಮಲ್ಲಾಬಾದಿ ಬಸವರಾಜ್, ಶಿವನಕೆರೆ ಬಸವಲಿಂಗಪ್ಪ, ಆವರಗೆರೆ ರುದ್ರಮುನಿ ಭಾಗವಹಿಸುವರು.

## ಮಲೇಬೆನ್ನೂರು : ಶಾಲಾ ಕೊಠಡಿ ಒಳಗೆ ಲಾಕ್ ಆದ ಮುಷ್ಯ



ಮಲೇಬೆನ್ನೂರು, ನ.22- ಪಟ್ಟಣದ ಹಳೇ ಊರು ಮತ್ತು ಆಜಾದ್ ನಗರದಲ್ಲಿ ಉಪಟಳ ಮಾಡುತ್ತಿದ್ದ ಮುಷ್ಯವು ಇಲ್ಲಿನ ಶ್ರೀ ಬೀರಲಿಂಗೇಶ್ವರ ಹೆಣ್ಣುಮಕ್ಕಳ ಪ್ರೌಢಶಾಲೆಯ ಕೊಠಡಿಯಲ್ಲಿ ಲಾಕ್ ಆಗಿದೆ.

ಇದೇ ಮುಷ್ಯ ಮಂಗಳವಾರ ಬೀರಲಿಂಗೇಶ್ವರ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿ ಮೇಲೆ ದಾಳಿ ಮಾಡಿ ಗಾಯಗೊಳಿಸಿತ್ತು.

ಇಂದು ಬೆಳಿಗ್ಗೆ 10 ಗಂಟೆಗೆ ತರಗತಿಗಳು ಪ್ರಾರಂಭವಾದ ಸ್ವಲ್ಪ ಹೊತ್ತಿನ ನಂತರ ಇದೇ ಮುಷ್ಯ ಶಾಲೆಯ ಕ್ಯಾಂಪಸ್‌ಗೆ ಆಗಮಿಸಿ, ಪಾಠ ನಡೆಯುತ್ತಿದ್ದ ಕೊಠಡಿಯೊಳಗೆ ನುಗ್ಗಿತು. ಇದರಿಂದ ಗಾಬರಿಗೊಂಡ ವಿದ್ಯಾರ್ಥಿನಿಯರು ಕೊಠಡಿಯಿಂದ ಹೊರಬಂದ ತಕ್ಷಣ ಕೊಠಡಿಯ ಬಾಗಿಲು ಹಾಕಿ ಮುಷ್ಯವನ್ನು ಕೊಠಡಿಯೊಳಗೆ ಲಾಕ್ ಮಾಡಲಾಯಿತು.

ಈ ವಿಷಯ ತಿಳಿದ ಅರಣ್ಯ ಇಲಾಖೆ ಸಿಬ್ಬಂದಿ ಮತ್ತು ಪುರಸಭೆ ಸಿಬ್ಬಂದಿಯವರು ಬೋನಿನೊಂದಿಗೆ ಸ್ಥಳಕ್ಕೆ ಆಗಮಿಸಿ, ಮುಷ್ಯವನ್ನು ಸೆರೆ ಹಿಡಿಯಲು ನಡೆಸಿದ ಪ್ರಯತ್ನ ವಿಫಲವಾಗಿದೆ. ಸದ್ಯ ಮುಷ್ಯ ಕೊಠಡಿ ಒಳಗಡೆಯೇ ಇದೆ. ಗುರುವಾರ ಏನಾದರೂ ಮಾಡಿ, ಆ ಮುಷ್ಯವನ್ನು ಸೆರೆ ಹಿಡಿದು ಶಿವಮೊಗ್ಗ ಅಥವಾ ಆನಗೋಡಿಗೆ ಕಳುಹಿಸಲಾಗುವುದೆಂದು ಗಸ್ತು ಅರಣ್ಯ ಪಾಲಕ ಎಸ್.ಸದನ 'ಜನತಾವಾಣಿ'ಗೆ ತಿಳಿಸಿದರು.

ರೈತ ಮುಖಂಡ ಮುದೇಗೌಡ್ರ ತಿಪ್ಪೇಶ್, ಪುರಸಭೆ ಮುಖ್ಯಾಧಿಕಾರಿ ಎ.ಸುರೇಶ್, ಅಧಿಕಾರಿಗಳಾದ ದಿನಕರ್, ಉಮೇಶ್, ನವೀನ್, ಶಿವರಾಜ್ ಹಾಗೂ ಅರಣ್ಯ ವೀಕ್ಷಕರಾದ ಚಂದ್ರಶೇಖರ್, ರಜಾಕ್ ನೂರ್ ಅಹಮದ್, ಖಲೀಲ್ ಈ ವೇಳೆ ಇದ್ದರು.


॥ ಶ್ರೀ ಬ್ರಹ್ಮದೇವ ಪ್ರಸನ್ನ ॥ ॥ ಶ್ರೀ ಸಿದ್ದೇಶ್ವರ ಪ್ರಸನ್ನ ॥

**ವಿವಾಹ ಮಹೋತ್ಸವ ಆಹ್ವಾನ ಪತ್ರಿಕೆ**

ದಾವಣಗೆರೆ ಜಿಲ್ಲೆ ಮತ್ತು ತಾಲ್ಲೂಕು ಬಿ. ಕಲಪನಹಳ್ಳಿ ಗ್ರಾಮದ ವಾಸಿ
ಮುದುಕಪ್ಪ ದಿ॥ ಶ್ರೀಮತಿ ನಾಗಮ್ಮ ದಿ॥ ಶ್ರೀ ಕೆ.ಎಂ. ಮಹಾಲಿಂಗಪ್ಪ ಇವರ ಮಗನಾದ
**ಶ್ರೀಮತಿ ಲಲಿತ, ಶ್ರೀ ಲಿಂಗರಾಜು ಕೆ.ಎಂ.**
ಹಾಗೂ ಬೆಂಗಳೂರು ದಕ್ಷಿಣ ಜಿಲ್ಲೆ ಯಲಹಂಕ ತಾಲ್ಲೂಕು ಶಿವಕೋಟೆ ಗ್ರಾಮದ ವಾಸಿ
**ಶ್ರೀಮತಿ ಮಂಜುಳ, ಶ್ರೀ ಶಿವಕುಮಾರ್** ಇವರು ಮಾಡುವ ವಿಜ್ಞಾಪನೆಗಳು.
ಸ್ವಸ್ತಿಶ್ರೀ ವಿಜಯಾಭ್ಯುದಯ ಶ್ರೀ ಮನ್ನೃಪ ಶಾಲಿವಾಹನ ಶಕೆ 1945ನೇ ಶ್ರೀ ಶೋಭಕೃತುನಾಮ ಸಂವತ್ಸರದ ದಕ್ಷಿಣಾಯನೇ ಶರದೃತು ಕಾರ್ತಿಕ ಮಾಸ ಶುದ್ಧ ದ್ವಾದಶಿ ದಿನಾಂಕ 24-11-2023ನೇ ಶುಕ್ರವಾರ ಬೆಳಿಗ್ಗೆ 9 ರಿಂದ 9.28ರವರೆಗೆ ಸಲ್ಲುವ ಧನಸ್ಸು ಲಗ್ನದ ಶುಭ ಮುಹೂರ್ತದಲ್ಲಿ

ಶ್ರೀಮತಿ ಲಲಿತ, ಶ್ರೀ ಲಿಂಗರಾಜು ಕೆ.ಎಂ. ಇವರ ಪುತ್ರಿ
**ಚಿ॥ಕುಂ॥ಸೌ॥ ಸಪ್ನ ಲಿಂಗರಾಜು ಕೆ.ಎಂ.**

ಶ್ರೀಮತಿ ಮಂಜುಳ, ಶ್ರೀ ಶಿವಕುಮಾರ್ ಇವರ ಸುಪುತ್ರ
**ಚಿ॥ ರಾ॥ ನವೀನ್ ಎಸ್.**

ಇವರ ವಿವಾಹ ಮಹೋತ್ಸವವನ್ನು ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಸಕುಟುಂಬ ಪರಿವಾರದೊಂದಿಗೆ ಆಗಮಿಸಿ, ವಧು-ವರರನ್ನು ಆಶೀರ್ವದಿಸಬೇಕಾಗಿ ಕೋರುವ,

ಆರತಕ್ಷತೆ : ದಿನಾಂಕ 23.11.2023 ನೇ ಗುರುವಾರ ಸಂಜೆ 7-30 ರಿಂದ

ವಿವಾಹ ಮುಹೂರ್ತ : 24.11.2023, ಶುಕ್ರವಾರ ಬೆಳಿಗ್ಗೆ 9 ರಿಂದ 9-28 ರವರೆಗೆ ಸಲ್ಲುವ ಧನಸ್ಸು ಲಗ್ನದಲ್ಲಿ

ವಿವಾಹ ಸ್ಥಳ : ಡಾ. ಶಾಮನೂರು ಶಿವಶಂಕರಪ್ಪ ಪಾರ್ವತಮ್ಮ ಸಮುದಾಯ ಭವನ ಹದಡಿ ರಸ್ತೆ, ದಾವಣಗೆರೆ.

ತಮ್ಮ ಆಗಮನಾಭಿಲಾಷಿಗಳು: ಶ್ರೀಮತಿ ಲಲಿತ, ಶ್ರೀ ಲಿಂಗರಾಜು ಕೆ.ಎಂ., ಕು॥ ಇಂದಿರಾ ಲಿಂಗರಾಜು ಕೆ.ಎಂ.
ಚಿ॥ ಭರತ್‌ಕುಮಾರ್ ಎಲ್.ಕೆ.ಎಂ. ಬಿ.ಕಲಪನಹಳ್ಳಿ.
ಶ್ರೀಮತಿ ಮಂಜುಳ, ಶ್ರೀ ಶಿವಕುಮಾರ್, ಬೆಂಗಳೂರು.

ತಮ್ಮ ಸುಖಾಗಮನ ಬಯಸುವವರು : ✦ದಿ॥ ಕೆ.ಎಂ. ಕೊಟ್ರೇಶಪ್ಪನವರ ಧರ್ಮಪತ್ನಿ ಶ್ರೀಮತಿ ಶರಣಮ್ಮ ಮತ್ತು ಮಕ್ಕಳು, ಬಿ.ಕಲಪನಹಳ್ಳಿ. ✦ಶ್ರೀ ಕೆ.ಎಂ. ಬಸವರಾಜಪ್ಪ, ಶ್ರೀಮತಿ ವಿಮಲ ಮತ್ತು ಮಕ್ಕಳು, ಮುದುಕಪ್ಪ ವಂಶಸ್ಥರು, ಬಿ.ಕಲಪನಹಳ್ಳಿ. ✦ಶ್ರೀ ಬಿ. ಸಿದ್ದರಾಮಪ್ಪ, ಶ್ರೀಮತಿ ಬಿ. ಗೌರಮ್ಮ ಮತ್ತು ಮಕ್ಕಳು ಕಗತೂರು. ಬಯಲಪ್ಪ ವಂಶಸ್ಥರು, ಕಗತೂರು ಹಾಗೂ ಬಂಧು-ಮಿತ್ರರು.

ವಿ.ಸೂ : ಆಹ್ವಾನ ಪತ್ರಿಕೆಗಳನ್ನು ಕಳುಹಿಸಲಾಗಿದ್ದು, ತಲುಪದವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಲು ಕೋರಿದೆ.

ಇಂದ: ಶ್ರೀಮತಿ ಲಲಿತ, ಶ್ರೀ ಲಿಂಗರಾಜು ಕೆ.ಎಂ. #1782/53ಎ, 6ನೇ ಕ್ರಾಸ್, ವಿನಾಯಕ ಬಡಾವಣೆ, ವಿದ್ಯಾನಗರ, ದಾವಣಗೆರೆ - 577 005. ಮೊ. : 94483 93145, 78138 11577



ನೋ.ಸಂ.22/ಎಸ್‌ಓಆರ್/ಎಸ್‌ಎಂಜಿ/90-91 ಮೊ:-98448-66944, 99643-49254

**ಭಾರತ್ ಎಜ್ಯುಕೇಷನ್ ಸೊಸೈಟಿ (ರಿ.)**

ಸಾಬೀರಾ ಪದವಿಪೂರ್ವ ಕಾಲೇಜು, ಕೆರೆಬಿಳಚಿ, ಚನ್ನಗಿರಿ ತಾಲ್ಲೂಕ್, ದಾವಣಗೆರೆ ಜಿಲ್ಲೆ-577218
(ಕರ್ನಾಟಕ ಸರ್ಕಾರದ ಮಾನ್ಯತೆ ಪಡೆದಿದೆ)

**ನೇಮಕಾತಿ ಪ್ರಕಟಣೆ** ದಿನಾಂಕ : 23-11-2023

ಭಾರತ್ ಎಜ್ಯುಕೇಷನ್ ಸೊಸೈಟಿ (ರಿ.), ಅಡಿಯಲ್ಲಿ ನಡೆಯುತ್ತಿರುವ ಸಾಬೀರಾ ಪದವಿಪೂರ್ವ ಕಾಲೇಜು, ಕೆರೆಬಿಳಚಿ, ಚನ್ನಗಿರಿ ತಾಲ್ಲೂಕ್, ದಾವಣಗೆರೆ ಜಿಲ್ಲೆ, ಈ ಕಾಲೇಜು ಸರ್ಕಾರದ ಸಹಾಯದ ಅನುದಾನಕ್ಕೆ ಒಳಪಟ್ಟಿದ್ದು, ಸದರಿ ಕಾಲೇಜಿನಲ್ಲಿ ಖಾಲಿಯಿರುವ ಅನುದಾನಿತ ಅರ್ಥಶಾಸ್ತ್ರ ಉಪನ್ಯಾಸಕರ ಹುದ್ದೆಗೆ (ವೇತನಶ್ರೇಣಿ ರೂ.43,100/- - 83,900/-) ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

**ಹುದ್ದೆ**

| ಹುದ್ದೆ ಮತ್ತು ಹುದ್ದೆಗಳ ಸಂಖ್ಯೆ | ಕಾಲೇಜಿನ ಹೆಸರು ಮತ್ತು ವಿಳಾಸ | ಮೀಸಲಾತಿ ಮತ್ತು ವಯೋಮಿತಿ | ವಿದ್ಯಾರ್ಹತೆ |
|---|---|---|---|
| ಅರ್ಥಶಾಸ್ತ್ರ ಉಪನ್ಯಾಸಕ ಹುದ್ದೆ-1 | ಸಾಬೀರಾ ಪದವಿಪೂರ್ವ ಕಾಲೇಜು, ಕೆರೆಬಿಳಚಿ-577218, ಚನ್ನಗಿರಿ ತಾಲ್ಲೂಕ್, ದಾವಣಗೆರೆ ಜಿಲ್ಲೆ, | ಸಾಮಾನ್ಯ ಅಭ್ಯರ್ಥಿಗಳಿಂದ ಅರ್ಜಿ ಸಲ್ಲಿಸಲು ನಿಗದಿ ಪಡಿಸಿದ ದಿನಾಂಕಕ್ಕೆ 40 ವರ್ಷ ವಯೋಮಿತಿ ಮೀರಿರಬಾರದು | ಎಂ.ಎ., ಅರ್ಥಶಾಸ್ತ್ರ, 55% ಮೇಲ್ಪಟ್ಟು ಬಿ.ಎಡ್., |

ಮೇಲ್ಕಂಡಂತೆ ಅರ್ಹತೆ ಹೊಂದಿರುವ ಆಸಕ್ತ ಅಭ್ಯರ್ಥಿಗಳು ಸದರಿ ಪತ್ರಿಕಾ ಪ್ರಕಟಣೆಯಾದ ದಿನಾಂಕದಿಂದ 21 ದಿನಗಳ ಒಳಗಾಗಿ ರೂ.2,000/- ಗಳ ಬ್ಯಾಂಕ್ ಹುಂಡಿ (ಡಿ.ಡಿ.)ಯನ್ನು ಭಾರತ್ ಎಜ್ಯುಕೇಷನ್ ಸೊಸೈಟಿ (ರಿ.), ಕೆರೆಬಿಳಚಿ, ಚನ್ನಗಿರಿ ತಾಲ್ಲೂಕ್, ದಾವಣಗೆರೆ ಜಿಲ್ಲೆ ಇವರ ಹೆಸರಿಗೆ ಅರ್ಜಿಯನ್ನು ಹಾಗೂ ವಿದ್ಯಾರ್ಹತೆಯ ದೃಢೀಕೃತ ದಾಖಲೆಗಳನ್ನು (ಎಸ್.ಎಸ್.ಎಲ್.ಸಿ., ಪಿ.ಯು.ಸಿ. ಎಂ.ಎ., ಬಿ.ಎಡ್., ಪ್ರಮಾಣಪತ್ರ ಇತ್ಯಾದಿ) ನೋಂದಣಿ ಅಂಚೆ ಮೂಲಕ ಆಡಳಿತ ಮಂಡಳಿಗೆ ಹಾಗೂ ಒಂದು ಪ್ರತಿಯನ್ನು ಉಪನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಕೊಠಡಿ ಸಂಖ್ಯೆ-47, 2ನೇ ಮಹಡಿ, ಜಿಲ್ಲಾಡಳಿತ ಭವನ, ಡಿ.ಸಿ. ಕಛೇರಿ, ಪಿ.ಬಿ.ರಸ್ತೆ, ದಾವಣಗೆರೆ ಇಲ್ಲಿಗೆ ಕಳುಹಿಸುವುದು.

ಕೊನೆಯ ದಿನಾಂಕದ ನಂತರ ಬಂದ ಅರ್ಜಿಗಳನ್ನು, ಅಪೂರ್ಣ ದಾಖಲೆ ಹೊಂದಿರುವ ಅರ್ಜಿಗಳನ್ನು, ಮುದ್ದಾಂ ನೀಡಿದ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಅಭ್ಯರ್ಥಿಗಳಿಗೆ ಮೆರಿಟ್ ಆಧಾರದ ಮೇಲೆ 5 ಅಭ್ಯರ್ಥಿಗಳಿಗೆ ಮಾತ್ರ ಸಂದರ್ಶನ ದಿನಾಂಕವನ್ನು ಅಂಚೆ ಮೂಲಕ ತಿಳಿಸಲಾಗುವುದು.

ಅಧ್ಯಕ್ಷರು/ಕಾರ್ಯದರ್ಶಿ,
ಭಾರತ್ ಎಜ್ಯುಕೇಷನ್ ಸೊಸೈಟಿ (ರಿ.)
ಕೆರೆಬಿಳಚಿ, ಚನ್ನಗಿರಿ ತಾಲ್ಲೂಕ್, ದಾವಣಗೆರೆ ಜಿಲ್ಲೆ.


ಚಿತ್ರ: ರಫೀಕ್, ಜನತಾವಾಣಿ

**ಕೆಂಪಾದವೋ....** ಬುಧವಾರ ಸಂಜೆ ಸೂರ್ಯ ಮುಳುಗುವ ಹೊತ್ತಿನಲ್ಲಿ ಮುಗಿಲು ಕೆಂಪಾಗಿತ್ತು. ದಾವಣಗೆರೆ ಹದಡಿ ರಸ್ತೆಯ ಕಟ್ಟಡದ ಮೇಲಿನಿಂದ ಕ್ಯಾಮೆರಾ ಕಣ್ಣಿನಲ್ಲಿ ಕಂಡಿದ್ದು ಹೀಗೆ.

# ಜಗಳೂರು ತಾ.ನಲ್ಲಿ ಬೆಳೆ ಹಾನಿ ಪರಿಶೀಲಿಸಿದ ಕೃಷಿ ಸಚಿವ

ಜಗಳೂರು, ನ. 22- ರಾಜ್ಯ ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಅವರು ಬುಧವಾರ ಜಿಲ್ಲೆಯ ಜಗಳೂರು ತಾಲ್ಲೂಕಿನ ವಿವಿಧೆಡೆ ರೈತರ ಜಮೀನುಗಳಿಗೆ ಭೇಟಿ ನೀಡಿ, ಮಳೆ ಇಲ್ಲದೆ ಅನಾವೃಷ್ಟಿಯಿಂದ ಹಾಳಾಗಿರುವ ಬೆಳೆ ಹಾನಿ ಪರಿಶೀಲಿಸಿದರು.

ಜಗಳೂರು ತಾಲ್ಲೂಕಿನ ಬಿಳಿಚೋಡು ಹಾಗೂ ದಾವಣಗೆರೆ ತಾ. ಕಂದನಕೋವಿ ಗ್ರಾಮದ ರೈತರ ಮೆಕ್ಕೆಜೋಳ ಬೆಳೆ ವೀಕ್ಷಣೆ ಮಾಡಿ, ಬೆಳೆ ಹಾನಿ ಕುರಿತು ಅಧಿಕಾರಿಗಳು ಹಾಗೂ ರೈತರಿಂದ ಮಾಹಿತಿ ಪಡೆದುಕೊಂಡರು.

ಜಗಳೂರು ತಾಲ್ಲೂಕಿನಲ್ಲಿ ಹೆಚ್ಚಾಗಿ ಮೆಕ್ಕೆಜೋಳ ಬೆಳೆಯಲಾಗುತ್ತಿದ್ದು, ಮುಂಗಾರು ಮಳೆ ಕೊರತೆಯಿಂದಾಗಿ ಮೆಕ್ಕೆಜೋಳ ಬೆಳೆ ಸಂಪೂರ್ಣ ಹಾಳಾಗಿದೆ. ಜಾನುವಾರುಗಳಿಗೂ ಸಹ ಮೇವು ಸಿಗುತ್ತಿಲ್ಲ ಎಂದು



ರೈತರು ಈ ವೇಳೆ ಅಳಲು ತೋಡಿಕೊಂಡರು.

ವಿಮಾ ಕಂಪನಿಗಳು ರೈತರಿಗೆ ಬೆಳೆವಿಮೆ ಪರಿಹಾರ ನೀಡದೇ ಮೋಸ ಮಾಡುತ್ತಿದ್ದಾರೆ. ಈ ಕುರಿತು ಅಗತ್ಯ ಕ್ರಮಕೈಗೊಳ್ಳಬೇಕು ಎಂದು ಕೃಷಿ ಸಚಿವರಿಗೆ ಬಿಳಿಚೋಡು ಗ್ರಾಮದ ರೈತರು ಮನವಿ ಮಾಡಿದರು.

ಇದಕ್ಕೆ ಪ್ರತಿಕ್ರಿಯಿಸಿದ ಕೃಷಿ ಸಚಿವರು, ಬೆಳೆ ವಿಮೆ ಪರಿಹಾರಕ್ಕೆ ಸಂಬಂಧಪಟ್ಟಂತೆ ಕಳೆದ ವರ್ಷ ಸಾಕಷ್ಟು ದೂರುಗಳು ಸಮಸ್ಯೆಗಳಿವೆ. ಆದರೆ ಈ ವರ್ಷದಿಂದ ಬೆಳೆ ಪರಿಹಾರಕ್ಕೆ ಯಾವುದೇ ಸಮಸ್ಯೆ ಇಲ್ಲ. ಈ ಕುರಿತು ಈಗಾಗಲೇ ಸಭೆ ನಡೆಸಲಾಗಿದ್ದು, ರೈತರಿಗೆ ತೊಂದರೆಯಾಗದಂತೆ ಬೆಳೆ ವಿಮೆ ಪರಿಹಾರಕ್ಕೆ ಕ್ರಮವಹಿಸಲಾಗಿದೆ ಎಂದು ಹೇಳಿದ ಅವರು, ಫ್ರೂಟ್ಸ್ ಐಡಿಯಲ್ಲಿ ರೈತರು ತಮ್ಮ ಹೆಸರಿನಲ್ಲಿರುವ ಎಲ್ಲ ಜಮೀನನ್ನು ನೋಂದಣಿ ಮಾಡಿಸಬೇಕು.ಇದರಿಂದ ಬರ ಪರಿಹಾರಕ್ಕೆ ಅನುಕೂಲವಾಗಲಿದೆ ಎಂದು ರೈತರಿಗೆ ಮನವಿ ಮಾಡಿದರು.

ಈ ಸಂದರ್ಭದಲ್ಲಿ ಮಾಯಕೊಂಡ ಶಾಸಕ ಕೆ.ಎಸ್.ಬಸವಂತಪ್ಪ, ಚನ್ನಗಿರಿ ಶಾಸಕರಾದ ಬಸವರಾಜ್ ವಿ.ಶಿವಗಂಗಾ, ಜಿಲ್ಲಾಧಿಕಾರಿ ಎಂ.ವಿ.ವೆಂಕಟೇಶ್, ಉಪವಿಭಾಗಾಧಿಕಾರಿ ದುರ್ಗಾಶ್ರೀ, ಜಂಟಿ ಕೃಷಿ ನಿರ್ದೇಶಕ ಶ್ರೀನಿವಾಸ್ ಚಿಂತಾಲ್, ಕೃಷಿ ಇಲಾಖೆ ಅಧಿಕಾರಿಗಳು ರೈತರು ಇದ್ದರು.

# ಸುದೀರ್ಘ ಇತಿಹಾಸದ ಕನ್ನಡ ಉಳಿಸಲು ಒಂದಾಗೋಣ



## ಕಸಾಪ ಜಿಲ್ಲಾಧ್ಯಕ್ಷ ಬಿ. ವಾಮದೇವಪ್ಪ ಕರೆ

ದಾವಣಗೆರೆ, ನ. 22- ಸುದೀರ್ಘ ಇತಿಹಾಸವುಳ್ಳ ಕನ್ನಡ ಭಾಷೆಯನ್ನು ಉಳಿಸುವಲ್ಲಿ ನಾವೆಲ್ಲರು ಒಂದಾಗುವ ಅಗತ್ಯವಿದೆ ಎಂದು ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಬಿ.ವಾಮದೇವಪ್ಪ ಹೇಳಿದರು.

ಜಿಲ್ಲಾ ಪದವಿ ಪೂರ್ವ ಕಾಲೇಜುಗಳ ಕನ್ನಡ ಉಪನ್ಯಾಸಕರ ವೇದಿಕೆ ಹಾಗೂ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಸಂಯುಕ್ತಾಶ್ರಯದಲ್ಲಿ ಕುವೆಂಪು ಕನ್ನಡ ಭವನದಲ್ಲಿ ಬುಧವಾರ ಹಮ್ಮಿಕೊಳ್ಳಲಾಗಿದ್ದ 'ಕನ್ನಡ ಪಠ್ಯ ಪುನರ್ಮನನ' ಕಾರ್ಯಾಗಾರದ ಉದ್ಘಾಟನಾ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ಆಜೀವ ಸದಸ್ಯತ್ವ ಪಡೆಯಲು ಎಲ್ಲರೂ ಸಿದ್ಧರಾಗುವಂತೆ ಹೇಳಿದ ಅವರು, ಕನ್ನಡ ಭಾಷೆಯ ಪುನಶ್ಚೇತನಕ್ಕೆ ಇಂತಹ ಕಾರ್ಯಾಗಾರಗಳು ಅತ್ಯವಶ್ಯವಾಗಿವೆ ಹಾಗೂ ಇಂತಹ ಉತ್ತಮ ಕಾರ್ಯಗಳಿಗೆ ಸಾಹಿತ್ಯ ಪರಿಷತ್ ಸದಾ ಜೊತೆಗಿರುತ್ತದೆ ಎಂದು ಹೇಳಿದರು.

ಪದವಿ ಪೂರ್ವ ಶಿಕ್ಷಣ ಇಲಾಖೆಯ ಹಿರಿಯ ಪ್ರಾಂಶುಪಾಲ ಸುರೇಶ್ ಎಸ್. ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಕನ್ನಡ ಭಾಷೆ ಅಭೂತಪೂರ್ವ ಶಕ್ತಿಯುಳ್ಳದ್ದು, ಈ ಭಾಷೆಯ ಮೂಲಕ ಕನ್ನಡತನವನ್ನು ಮೈಗೂಡಿಸಿಕೊಂಡು ಬಾಳಿದರೆ ಅದಕ್ಕೊಂದು ಅರ್ಥ ಬರುತ್ತದೆ ಎಂದು ಹೇಳಿದರು.

ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ್ದ ನೀರಜಾ ಸಿ.ಟಿ. ದ್ವಿತೀಯ ಪಿಯುಸಿ ಪ್ರಶ್ನೆ ಪತ್ರಿಕೆ ಮಾದರಿ ಹಾಗೂ ನೀಲ ನಕ್ಷೆಯ ಕುರಿತು ವಿಸ್ತೃತವಾಗಿ ತಿಳಿಸಿದರು. ಮತ್ತೋರ್ವ ಸಂಪನ್ಮೂಲ ವ್ಯಕ್ತಿ ಸತ್ಯನಾರಾಯಣ ಅವರು ಪಿಯುಸಿ ಗದ್ಯ ಬೋಧನೆ ಕುರಿತು ಮಾಹಿತಿ ನೀಡಿದರು.

ಮುಖ್ಯ ಅತಿಥಿಗಳಾಗಿ ಪ್ರದೀಪ್ ಕುಮಾರ್ ಎಸ್., ಕೆ.ಹೆಚ್. ಮಂಜುನಾಥ ರೆಡ್ಡಿ, ಸಿ.ಟಿ. ರವಿ, ಶ್ವೇತಾ ಆರ್. ಗಾಂಧಿ ಆಗಮಿಸಿದ್ದರು.

ಎಸ್.ಎಂ. ಗಂಗಪ್ಪಳವರ್ ಅಧ್ಯಕ್ಷತೆ ವಹಿಸಿದ್ದರು. ನಾಗಪ್ಪ ಪ್ರಾಸ್ತಾವಿಕವಾಗಿ ಮಾತನಾಡಿದರು. ಓಹಿಲೇಶ್ವರ್ ಸ್ವಾಗತಿಸಿದರು. ಉಷಾ ಇ ನಿರೂಪಿಸಿದರು. ಪ್ರದೀಪ್ ಕೆ.ವಿ. ಕಾರಂತ್ ವಂದಿಸಿದರು. ತಿಪ್ಪೇಸ್ವಾಮಿ ಕೆ., ರಾಮಾಂಜನೇಯ, ಎನ್., ದೇವರಾಜ್, ಪ್ರಸನ್ನ, ಲತೀಫ್ ನವಿಲೇಹಾಳ್ ಉಪಸ್ಥಿತರಿದ್ದರು.

# ಪೀಡಿಸುವ ಉದ್ದೇಶದಿಂದ ಹೈಕೋರ್ಟ್ ನ್ಯಾಯಮೂರ್ತಿ ವರ್ಗಾವಣೆ

## ನಿವೃತ್ತಿಯ ದಿನದಂದು ವಿವರ ಬಹಿರಂಗ ಪಡಿಸಿದ ಉತ್ತರ ಪ್ರದೇಶ ಹೈಕೋರ್ಟ್ ನ್ಯಾಯಮೂರ್ತಿ

ಪ್ರಯಾಗ್‌ರಾಜ್, ನ. 22 - 2018ರಲ್ಲಿ ನನ್ನನ್ನು ಪೀಡಿಸುವ ದುರುದ್ಧೇಶದಿಂದ ಛತ್ತೀಸ್‌ಘಡ ಹೈಕೋರ್ಟ್‌ನಿಂದ ವರ್ಗಾವಣೆ ಮಾಡಲಾಗಿತ್ತು ಎಂದು ಉತ್ತರ ಪ್ರದೇಶದ ಅಲಹಾಬಾದ್ ಹೈಕೋರ್ಟ್ ನಿವೃತ್ತ ಮುಖ್ಯ ನ್ಯಾಯಮೂರ್ತಿ ಪ್ರೀತಿಂಕರ್ ದಿವಾಕರ್ ಅವರು ತಮ್ಮ ವಿದಾಯ ಭಾಷಣದಲ್ಲಿ ತಿಳಿಸಿದ್ದಾರೆ.

ಆಗಿನ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ದೀಪಕ್ ಮಿಶ್ರ ಅವರ ನೇತೃತ್ವದ ಕೊಲೀಜಿಯಂ ತಮ್ಮನ್ನು ಪೀಡಿಸಲು ವರ್ಗಾವಣೆ ಮಾಡಿತ್ತು ಎಂದವರು ಹೇಳಿದ್ದಾರೆ.

ನ್ಯಾಯಮೂರ್ತಿ ದಿವಾಕರ್ ನಿವೃತ್ತಿಯ ಹಿನ್ನೆಲೆಯಲ್ಲಿ ಹೈಕೋರ್ಟ್ ಪೀಠದಲ್ಲಿ ವಿದಾಯ ಕಾರ್ಯಕ್ರಮ ಆಯೋಜಿಸಲಾಗಿತ್ತು. ಈ ರೀತಿಯ ಸಂದರ್ಭಗಳಲ್ಲಿ ನ್ಯಾಯಮೂರ್ತಿ ಪೀಡನೆಯ ಹೇಳಿಕೆ ನೀಡಿರುವುದು ಅಸಾಮಾನ್ಯವಾಗಿದೆ.

ಮಾರ್ಚ್ 31, 2009ರಲ್ಲಿ ನನಗೆ ಪೀಠಕ್ಕೆ ಬಡ್ತಿ ನೀಡಲಾಗಿತ್ತು. ಛತ್ತೀಸ್‌ಘಡ ಹೈಕೋರ್ಟ್ ನ್ಯಾಯಮೂರ್ತಿಯಾಗಿ ಅಕ್ಟೋಬರ್ 2018ರವರೆಗೆ ಕಾರ್ಯನಿರ್ವಹಿಸಿದ್ದೆ. ನನ್ನ ಕೆಲಸ ಎಲ್ಲರಿಗೂ ತೃಪ್ತಿ ತಂದಿತ್ತು ಎಂದು ನ್ಯಾಯಮೂರ್ತಿ ದಿವಾಕರ್ ನೆನಪಿಸಿಕೊಂಡಿದ್ದಾರೆ.

ಹಠಾತ್ತನೆ ನಡೆದ ಬೆಳವಣಿಗೆಯಲ್ಲಿ ಆಗಿನ ಮುಖ್ಯ ನ್ಯಾಯಮೂರ್ತಿ ದೀಪಕ್ ಮಿಶ್ರ ಅವರು ನನ್ನ ಮೇಲೆ ಅಸಾಧಾರಣ ಒಲವು ತೋರಿದರು. ಯಾವ ಕಾರಣಕ್ಕೋ ನನ್ನನ್ನು ಅಲಹಾಬಾದ್ ಹೈಕೋರ್ಟ್‌ಗೆ ವರ್ಗಾವಣೆ ಮಾಡಿದರು. ಅಕ್ಟೋಬರ್ 3, 2108ರಂದು ನಾನು ಇಲ್ಲಿ ಅಧಿಕಾರ ವಹಿಸಿಕೊಂಡೆ ಎಂದವರು ಹೇಳಿದರು.

ನನ್ನ ಪೀಡನೆಯ ದುರುದ್ದೇಶದಿಂದ ವರ್ಗಾವಣೆ ಮಾಡಲಾಗಿತ್ತು ಎನ್ನಿಸುತ್ತಿದೆ. ಆದರೆ, ಅದೃಷ್ಟವಶಾತ್ ಈ ಶಾಪವೇ ನನಗೆ ವರವಾಗಿ ಪರಿಣಮಿಸಿತು. ನನಗೆ ಇಲ್ಲಿ ಅಪಾರ ಬೆಂಬಲ ಹಾಗೂ ಸಹಕಾರ ದೊರೆಯಿತು ಎಂದು ನ್ಯಾಯಮೂರ್ತಿ ದಿವಾಕರ್ ಹೇಳಿದರು.

# ಜಾತಿ ಸಮೀಕ್ಷೆ ಕೈ ಸೇರಿದ ಮೇಲೆ ತೀರ್ಮಾನ: ಮುಖ್ಯಮಂತ್ರಿ



ಬೆಂಗಳೂರು, ನ. 22 - ಜಾತಿ ಸಮೀಕ್ಷೆ ವರದಿ ಇನ್ನೂ ನಮ್ಮ ಕೈ ಸೇರಿಲ್ಲ. ಕೊಟ್ಟ ಮೇಲೆ ತೀರ್ಮಾನ ಕೈಗೊಳ್ಳಲಾ ಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಜಾತಿ ಸಮೀಕ್ಷೆ ವರದಿ ಕೊಡುವ ಮುನ್ನವೇ ಏಕೆ ವಿರೋಧ ಎಂದರು. ಮೂಲಪ್ರತಿ ಕಾಣೆಯಾಗಿದೆ ಎಂಬ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಜಯಪ್ರಕಾಶ್ ಹೆಗ್ಡೆ ಹೇಳಿಕೆ ಬಗ್ಗೆ ನನಗೆ ತಿಳಿದಿಲ್ಲ. ನನ್ನನ್ನು ಭೇಟಿಯಾಗಿ ವರದಿ ಸಲ್ಲಿಸುತ್ತಾರೆ. ಅಲ್ಲಿಯವರೆಗೆ ಅವಧಿ ವಿಸ್ತರಣೆ ಮಾಡಿ ಎಂದು ಮನವಿ ಮಾಡಿದ್ದರು. ವರದಿ ಯಾವಾಗ ಕೊಡುತ್ತಾರೋ ಅಲ್ಲಿಯವರೆಗೆ ಅವಧಿ ವಿಸ್ತರಣೆಯಾಗುತ್ತದೆ ಎಂದರು.

ವರದಿ ಸಿದ್ಧಪಡಿಸಲು 162 ಕೋಟಿ ರೂ. ಖರ್ಚು ಮಾಡಲಾಗಿದೆ. ವರದಿ ಬಂದ ನಂತರ ಎಲ್ಲಾ ಸಂಶಯಗಳು ನಿವಾರಣೆಯಾಗಲಿದೆಯೋ, ಇಲ್ಲವೋ ನೋಡೋಣ. ವರದಿಯಲ್ಲಿ ಏನಿದೆ ಎಂಬುದು ತಿಳಿದಿಲ್ಲ. ಬರುವ ಡಿಸೆಂಬರ್‌ನಲ್ಲಿ ವರದಿ ಸಲ್ಲಿಸುವ ನಿರೀಕ್ಷೆ ಇದೆ. ಉಪಮುಖ್ಯಮಂತ್ರಿ ಡಿ. ಕೆ.ಶಿವಕುಮಾರ್ ಈ ಬಗ್ಗೆ ತಮ್ಮ ಬಳಿ ಏನನ್ನೂ ಮಾತನಾಡಿಲ್ಲ, ನಿಗಮ-ಮಂಡಳಿಗಳ ನೇಮಕಾತಿಗೆ ಸಂಬಂಧಿಸಿದಂತೆ ಪೂರ್ವಭಾವಿ ಚರ್ಚೆಯಾಗಿದ್ದು, ಯಾರನ್ನು ಮಾಡಬೇಕೆಂಬ ಬಗ್ಗೆ ಅಂತಿಮಗೊಳಿಸಿಲ್ಲ ಎಂದರು.

## ಇಂದಿನಿಂದ ರಾಗಿ, ನವಣೆ ಬೆಳೆಯ ಮೌಲ್ಯವರ್ಧನೆ ತರಬೇತಿ

ದಾವಣಗೆರೆಯ ಐಸಿಎಆರ್-ತರಳಬಾಳು ಕೃಷಿ ವಿಜ್ಞಾನ ಕೇಂದ್ರ ಹಾಗು ರಾಷ್ಟ್ರೀಯ ಕೃಷಿ ಮಾರುಕಟ್ಟೆ ಸಂಸ್ಥೆ (ಜೈಪುರ - ರಾಜಸ್ಥಾನ) ಇವರುಗಳ ಸಂಯುಕ್ತಾಶ್ರಯದಲ್ಲಿ 'ರಾಗಿ ಮತ್ತು ನವಣೆ ಬೆಳೆಯ ಮೌಲ್ಯವರ್ಧನೆ, ಪ್ಯಾಕಿಂಗ್, ಬ್ರಾಂಡಿಂಗ್ ಮತ್ತು ಮಾರುಕಟ್ಟೆಯ ಬಗ್ಗೆ ತರಬೇತಿ'ಯನ್ನು ಸ್ಥಳೀಯ ಐಸಿಎಆರ್-ತರಳಬಾಳು ಕೃಷಿ ವಿಜ್ಞಾನ ಕೇಂದ್ರದಲ್ಲಿ ಇಂದಿನಿಂದ ಇದೇ ದಿನಾಂಕ25ರವರೆಗೆ ನಡೆಯಲಿವೆ.

ನೋಂದಣಿ ಮಾಡಿಕೊಳ್ಳಲು ಕೆವಿಕೆಯ ಕೃಷಿ ವಿಸ್ತರಣಾ ತಜ್ಞ ಜೆ. ರಘುರಾಜ (9449833583) ಅವರನ್ನು ಸಂಪರ್ಕಿಸಬಹುದು.

## ಗ್ರಾಮಾಂತರದಲ್ಲಿ ಇಂದು ವಿದ್ಯುತ್ ಇಲ್ಲ

ಬಿಳಿಚೋಡು-ಪಲ್ಲಾಗಟ್ಟೆ ವಿ.ವಿ ಕೇಂದ್ರದ ವ್ಯಾಪ್ತಿಗೆ ಬರುವ ಎಲ್ಲಾ ಗ್ರಾಮಗಳ ಎನ್.ಜೆ.ವೈ ಮಾರ್ಗಗಳು, ನೀರಾವರಿ ಪಂಪ್‌ಸೆಟ್ ಮಾರ್ಗಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

# ಕನ್ನಡದ ಬಗ್ಗೆ ವಿದ್ಯಾರ್ಥಿಗಳು ಅಭಿಮಾನ ಹೊಂದಬೇಕು

## ಹರಿಹರ : ಕವಿಗೋಷ್ಠಿಯಲ್ಲಿ ಕನ್ನಡ ಪರ ಹೋರಾಟಗಾರ ಹೆಚ್. ಸುಧಾಕರ್



ಹರಿಹರ,ನ.22- ನಗರದ ಎಸ್.ಜೆ.ವಿ.ಪಿ ಪದವಿ ಕಾಲೇಜ್ ಮತ್ತು ಚುಟುಕು ಸಾಹಿತ್ಯ ಪರಿಷತ್ತು ದಾವಣಗೆರೆ ಜಿಲ್ಲಾ ಘಟಕದ ಆಶ್ರಯದಲ್ಲಿ ಶ್ರೀಶೈಲ ಜಗದ್ಗುರುಗಳವರ ಜನ್ಮದಿನ ಮತ್ತು ಕನ್ನಡ ರಾಜ್ಯೋತ್ಸವದ ಅಂಗವಾಗಿ ಅಂತರ್ ಜಿಲ್ಲಾ ಮಟ್ಟದ ಕವಿಗೋಷ್ಠಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಕನ್ನಡ ಪರ ಹೋರಾಟಗಾರ ಹೆಚ್. ಸುಧಾಕರ್ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ಇಂದಿನ ವಿದ್ಯಾರ್ಥಿಗಳು ಕನ್ನಡದ ಬಗ್ಗೆ ಹೆಚ್ಚು ಅಭಿಮಾನವನ್ನು ಹೊಂದಬೇಕು ಎಂದು ತಿಳಿಸಿ, ನಾನು ಓದಿದ ಸಂಸ್ಥೆಯು ಇಂದು ಅನೇಕ ಶೈಕ್ಷಣಿಕ ಮತ್ತು ಸಾಮಾಜಿಕ ಕಾರ್ಯಕ್ರಮಗಳನ್ನು ಮಾಡುತ್ತಾ ನಮ್ಮ ತಾಲ್ಲೂಕಿನಲ್ಲಿ ಉತ್ತಮವಾಗಿ ಶೈಕ್ಷಣಿಕ ಕ್ರಾಂತಿಯನ್ನು ಮಾಡುತ್ತಿರುವುದು ಹೆಮ್ಮೆಯ ವಿಚಾರ ಎಂದು ತಿಳಿಸಿದರು.

ಸಂಸ್ಥೆಯ ಉಪಾಧ್ಯಕ್ಷ ಡಿ.ಎಂ ಹಾಲಸ್ವಾಮಿ, ನಿರ್ದೇಶಕರಾದ ಡಿ.ಜಿ.ಶಿವಾನಂದಪ್ಪ, ಎನ್.ಹೆಚ್.ಪಾಟೀಲ್, ಪದವಿ ಕಾಲೇಜಿನ ಉಪನ್ಯಾಸಕ ವೀರಣ್ಣ ಬಿ.ಶೆಟ್ಟರ್, ಶಿವಯೋಗಿ ಹಿರೇಮಠ, ಶ್ರೀಮತಿ ರತ್ನಮ್ಮ ಸಾಲಿಮಠ ಉಪಸ್ಥಿತರಿದ್ದರು.

ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಜಿ.ಎಚ್. ರಾಜಶೇಖರ ಗುಂಡುಗತ್ತಿಯವರ ಅಧ್ಯಕ್ಷತೆಯಲ್ಲಿ ನಡೆದ ಕವಿಗೋಷ್ಠಿಯಲ್ಲಿ ವಿವಿಧ ಜಿಲ್ಲೆಗಳಿಂದ ಆಗಮಿಸಿದ್ದ ಸುಮಾರು 140 ಕ್ಕೂ ಹೆಚ್ಚಿನ ಕವಿಗಳು ತಮ್ಮ ಕವನಗಳನ್ನು ವಾಚನ ಮಾಡಿದರು.

# ದುಬೈ : ಕನ್ನಡ ರಾಜ್ಯೋತ್ಸವ ಕಾರ್ಯಕ್ರಮಕ್ಕೆ ಚಿರಂತನ ತಂಡ

ದಾವಣಗೆರೆ, ನ.22- ಕರ್ನಾಟಕ ಸಂಘ ದುಬೈ ಅವರಿಂದ ಇದೇ ನ.26ರ ಭಾನುವಾರ 68ನೇ ಕರ್ನಾಟಕ ರಾಜ್ಯೋತ್ಸವ ಹಮ್ಮಿಕೊಂಡಿದ್ದು, ಈ ಕಾರ್ಯಕ್ರಮದಲ್ಲಿ ಚಿರಂತನ ಅಕಾಡೆಮಿ ಕಲಾವಿದರು ಮಹಿಷ ಮರ್ಧಿನಿ ನೃತ್ಯ ರೂಪಕ ಹಾಗೂ ಜಾನಪದ ಶೈಲಿಯ ನೃತ್ಯಗಳನ್ನು ಪ್ರಸ್ತುತ ಪಡಿಸಲಿದ್ದಾರೆ ಎಂದು ಕಾರ್ಯದರ್ಶಿ ಮಾಧವ್ ಪದಕಿ ಹೇಳಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಚಿರಂತನದ 22 ಕಲಾವಿದರನ್ನೊಳಗೊಂಡು ದಾವಣಗೆರೆಯಿಂದ ಸುಮಾರು 40 ಕಲಾದವಿದರು ದುಬೈಗೆ



ತೆರಳುತ್ತಿದ್ದಾರೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ನೃತ್ಯ ಗುರು ಡಾ.ಸಂಜಯ್ ಶಾಂತಾರಾಮ್ ಹಾಗೂ ತಂಡದಿಂದ 'ಕರ್ನಾಟಕ ದರ್ಶನ 'ವಿಶೇಷ ನೃತ್ಯ ರೂಪಕ ಪ್ರದರ್ಶನಗೊಳ್ಳಲಿದೆ.

ಮಜಾ ಟಾಕೀಸ್ ಹಾಗೂ ಗಿಚ್ಚಿ ಗಿಲಿ ಗಿಲಿ ಹಾಗೂ ಕಾಂತಾರಾ ಖ್ಯಾತಿಯ ಹಾಸ್ಯ ಕಲಾವಿದರ ಹಾಸ್ಯ ಕಾರ್ಯಕ್ರಮಗಳು ಇರಲಿವೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ್ ತಂಗಡಗಿ ಹಾಗೂ ಸಂಸದೆ ಸುಮಲತಾ ಅಂಬರೀಶ್, ಕರ್ನಾಟಕ ಎನ್‌ಆರ್‌ಐ ಫೋರಂನ ಉಪಾಧ್ಯಕ್ಷೆ ಡಾ.ಆರತಿ ಕೃಷ್ಣ ಸೇರಿದಂತೆ 200ಕ್ಕೂ ಹೆಚ್ಚು ಕಲಾವಿದರು ಮತ್ತು ಅತಿಥಿಗಳು ಭಾಗವಹಿಸಲಿದ್ದಾರೆ ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ರಕ್ಷಾ ರಾಜಶೇಖರ್, ವೆಂಕಟೇಶ್, ಗಿರಿಜಾ ಇದ್ದರು.

# 4 ದಿನಗಳ ಕದನ ವಿರಾಮಕ್ಕೆ ಇಸ್ರೇಲ್-ಹಮಾಸ್ ಸಹಮತ



ನವದೆಹಲಿ, ನ. 22 - ಹಲವು ವಾರಗಳ ಕಾಲ ನಡೆದ ತೀವ್ರ ಯುದ್ಧದ ಬಳಿಕ, ಇಸ್ರೇಲ್ ಮತ್ತು ಹಮಾಸ್ ಎರಡೂ ನಾಲ್ಕು ದಿನಗಳ ಕದನ ವಿರಾಮಕ್ಕೆ ಸಮ್ಮತಿಸಿವೆ.

ಇದು ಉಗ್ರರ ವಶದಲ್ಲಿರುವ ಹಲವಾರು ಒತ್ತೆಯಾಳುಗಳು ಹಾಗೂ ಇಸ್ರೇಲ್ ವಶದಲ್ಲಿರುವ ಪ್ಯಾಲೆಸ್ತೇನಿಯರ ವಿನಿಮಯಕ್ಕೆ ದಾರಿ ಮಾಡಿಕೊಡಲಿದೆ. ಪ್ಯಾಲೆಸ್ತೇನಿಗೆ ಹೆಚ್ಚಿನ ನೆರವು ತಲುಪಿಸಲು ಸಾಧ್ಯವಾಗಲಿದೆ. ಆದರೂ, ಕದನ ವಿರಾಮದ ಅವಧಿ ಪೂರ್ಣಗೊಂಡ ನಂತರ ಯುದ್ಧ ಮುಂದುವರೆಸಲಾಗುವುದು. ನಮ್ಮ ಗುರಿಗಳನ್ನು ಸಂಪೂರ್ಣ ತಲುಪುವವರೆಗೆ ಹೋರಾಟ ಮುಂದುವರೆಯಲಿದೆ ಎಂದು ಇಸ್ರೇಲ್ ಪ್ರಧಾನ ಮಂತ್ರಿ ಬೆಂಜಮಿನ್ ನೇತನ್ಯಾಹು ಹೇಳಿದ್ದಾರೆ.

ಇಸ್ರೇಲ್ ಹಾಗೂ ಹಮಾಸ್ ನಡುವೆ ಮಧ್ಯಸ್ಥಿಕೆಯಲ್ಲಿ ಈಜಿಪ್ಟ್, ಕತಾರ್ ಮತ್ತು ಅಮೆರಿಕ ನೆರವಾಗಿವೆ.

ಐವತ್ತು ಒತ್ತೆಯಾಳುಗಳನ್ನು ಹಮಾಸ್ ಬಿಡುಗಡೆ ಮಾಡಲಿದೆ. 150 ಪ್ಯಾಲೆಸ್ತೇನಿಯರನ್ನು ಇಸ್ರೇಲ್ ಬಿಡುಗಡೆ ಮಾಡಲಿದೆ.

## ಕಾರ್ಯಾಚರಣೆ ವೇಳೆ ಸೈನಿಕರು ಹುತಾತ್ಮ

ಜಮ್ಮು, ನ. 22 – ಜಮ್ಮು ಮತ್ತು ಕಾಶ್ಮೀರದ ರಜೌರಿ ಜಿಲ್ಲೆಯಲ್ಲಿ ಉಗ್ರರ ವಿರುದ್ಧ ನಡೆಸಲಾದ ಕಾರ್ಯಾಚರಣೆ ವೇಳೆ ಇಬ್ಬರು ಕ್ಯಾಪ್ಟನ್‌ಗಳೂ ಸೇರಿದಂತೆ ನಾಲ್ವರು ಸೈನಿಕ ಸಿಬ್ಬಂದಿ ಹುತಾತ್ಮರಾಗಿದ್ದಾರೆ.

ಗುಂಡಿನ ಚಕಮಕಿ ಮುಂದುವರೆದಿದ್ದು, ಇನ್ನಷ್ಟು ಪಡೆಗಳನ್ನು ಸ್ಥಳಕ್ಕೆ ರವಾನಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಕಾರ್ಯಾಚರಣೆ ವೇಳೆ ಇಬ್ಬರು ಕ್ಯಾಪ್ಟನ್, ಒಬ್ಬ ಹವಾಲ್ದಾರ್ ಹಾಗೂ ಓರ್ವ ಸೈನಿಕ ಸಾವನ್ನಪ್ಪಿರುವುದಾಗಿ ಅಧಿಕಾರಿಗಳು ತಿಳಿಸಿದ್ದಾರೆ. ಇಬ್ಬರು ಗಾಯಗೊಂಡಿದ್ದು ಅವರನ್ನು ಉಧಾಂಪುರದಲ್ಲಿರುವ ಸೈನ್ಯದ ಆಸ್ಪತ್ರೆಗೆ ದಾಖಲಿಸಲಾಗಿದೆ.

## ಡಾಲರ್ಸ್ ಕಾಲೋನಿಯಲ್ಲಿ ಕಳ್ಳತನ

ದಾವಣಗೆರೆ, ನ.22- ಡಾಲರ್ಸ್ ಕಾಲೋನಿಯ ಮನೆಯೊಂದರಲ್ಲಿ ಕಳ್ಳತನವಾಗಿದ್ದು, ಬಂಗಾರ ಹಾಗೂ ಬೆಳ್ಳಿ ಆಭರಣಗಳು ಹಾಗೂ ನಗದನ್ನು ಕಳ್ಳರು ದೋಚಿ ಪರಾರಿಯಾಗಿದ್ದಾರೆ.

ಮನೆಗೆ ಬೀಗ ಹಾಕಿಕೊಂಡು ಕುಟುಂಬ ಸಹಿತ ಸಂಬಂಧಿಕರ ಮದುವೆಗೆ ಹಡಗಲಿಯ ಹೊಳಗುಂದಿಗೆ ಹೋಗಿ ರಾತ್ರಿ ವಾಪಾಸ್ ಬಂದಾಗ ಈ ಘಟನೆ ನಡೆದಿರುವುದಾಗಿ ಪಿ.ಗುರುಬಸವನಗೌಡ ವಿದ್ಯಾನಗರ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

# ಅಪೌಷ್ಟಿಕತೆಯಲ್ಲಿ ಗುಜರಾತ್, ಭಾರತದ ಸೂಚ್ಯಂಕ ಏರಿಕೆ

ಬೆಂಗಳೂರು, ನ. 22 - ಅಪೌಷ್ಟಿಕತೆ ಸೂಚ್ಯಂಕದಲ್ಲಿ ಗುಜರಾತ್ ರಾಜ್ಯ ಮತ್ತು ಭಾರತದ ಸೂಚ್ಯಂಕ ಏರಿಕೆ ಆಗುತ್ತಲೇ ಇದೆ. ಏಕೆ ಹೀಗಾಯ್ತು ಎಂದು ತನ್ನನ್ನು ತಾನು ವಿಶ್ವಗುರು ಎಂದು ಕರೆದುಕೊಳ್ಳುವ ಪ್ರಧಾನ ಮಂತ್ರಿ ಮೋದಿಯವರು ಉತ್ತರಿಸಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶ್ನಿಸಿದರು.

ರಾಜ್ಯ ಸರ್ಕಾರದ ಅತ್ಯಂತ ಮಹತ್ವಪೂರ್ಣ ಮತ್ತು ಅತ್ಯಂತ ಜನಾರೋಗ್ಯ ಕಾರ್ಯಕ್ರಮವಾದ ಅನಿಮಿಯಾ ಮುಕ್ತ ಪೌಷ್ಟಿಕ ಕರ್ನಾಟಕ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಗುಜರಾತ್ ಮಾದರಿ, ಗುಜರಾತ್ ಮಾದರಿ ಎನ್ನುವವರು ಗುಜರಾತ್ ಅಪೌಷ್ಟಿಕತೆ ಸೂಚ್ಯಂಕದಲ್ಲಿ ಮೇಲಕ್ಕೆ ಏರುತ್ತಿರುವುದು ಏಕೆ? ಎನ್ನುವುದಕ್ಕೆ ಉತ್ತರಿಸಬೇಕು.

ಗುಜರಾತ್‌ನ ಈ ಸ್ಥಿತಿ ಮಾದರಿ ಆಗಲು ಸಾಧ್ಯವೇ? ಎಂದು ರಾಷ್ಟ್ರೀಯ ಕುಟುಂಬ ಮತ್ತು ಆರೋಗ್ಯ ಸಮೀಕ್ಷೆ 4 ಮತ್ತು 5 ರಲ್ಲಿ ಇರುವ ಅಂಕಿ-ಅಂಶಗಳನ್ನು ತುಲನೆ ಮಾಡಿ ಲೇವಡಿ ಮಾಡಿದರು. ಬಡತನ - ದಾರಿದ್ರ್ಯ - ಅನಕ್ಷರತೆ ಹೋಗದೆ ಎಲ್ಲರಿಗೂ ಉತ್ತಮ ಆರೋಗ್ಯ ಸಿಗುವುದಿಲ್ಲ. ಆದ್ದರಿಂದ ಈ ಮೂರೂ ಪಿಡುಗುಗಳಿಗೆ ಚಿಕಿತ್ಸೆ ಕೊಡುವುದು ನಮ್ಮ ಸರ್ಕಾರದ ಪ್ರಥಮ ಆದ್ಯತೆಯಾಗಿದೆ.

ಪ್ರತಿಯೊಬ್ಬರ ಮನೆ ಬಾಗಿಲಿಗೆ ಆರೋಗ್ಯದ ಸವಲತ್ತು ತಲುಪಿಸುವುದು ನಮ್ಮ ಸರ್ಕಾರದ ಗುರಿಯಾಗಿದೆ. ಇದಕ್ಕಾಗಿ ಸರ್ಕಾರ ಅಗತ್ಯವಿದ್ದಷ್ಟು ಹಣ ನೀಡಲು ಸಿದ್ಧವಿದೆ ಎಂದರು.

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಮತ್ತು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಇಬ್ಬರೂ ಸೇರಿ, ನಮ್ಮ ರಾಜ್ಯದ ಮಕ್ಕಳು ಮತ್ತುಪ್ರತಿಯೊಬ್ಬರೂಅತ್ಯಂತಆರೋಗ್ಯವಂತರಾಗುವಂತೆ ಇನ್ನಷ್ಟು ಹೆಚ್ಚೆಚ್ಚು ಶ್ರಮಿಸಿ ಸರ್ಕಾರದ ಗುರಿಯನ್ನು ಸಾಧಿಸಿ ತೋರಿಸಬೇಕು ಎಂದು ಕರೆ ನೀಡಿದರು.

# ಬಲಿಗಾಗಿ ಕಾದಿದೆ ಎಪಿಎಂಸಿ ಮೇಲ್ಸೇತುವೆ ಅಂಚು: ಕಣ್ಮುಚ್ಚಿ ಕುಳಿತ ಅಧಿಕಾರಿಗಳು





ಇದು ದಾವಣಗೆರೆ ಎಪಿಎಂಸಿ ಬಳಿಯ ಮೇಲ್ಸೇತುವೆ. ಸೇತುವೆಯ ದ್ವಿಮುಖ ರಸ್ತೆಯ ಎರಡೂ ಅಂಚಿನಲ್ಲಿ ಬೃಹದಾಕಾರದ ಗುಂಡಿಗಳು ಬಿದ್ದು ವರ್ಷವೇ ಗತಿಸಿದೆ. ಆದರೆ ರಿಪೇರಿ ಮಾಡುವಂತಹ ಔದಾರ್ಯವನ್ನು ಯಾವ ಅಧಿಕಾರಿಗಳೂ ತೋರಿಸದಿರುವುದು ದುರಂತ. ರಸ್ತೆ ರಿಪೇರಿ ಉಸಾಬರಿ ನಮ್ಮದಲ್ಲ ರೈಲ್ವೇ ಇಲಾಖೆಯದ್ದು ಎಂದು ಎಪಿಎಂಸಿ ಅಧಿಕಾರಿಗಳು ನುಣುಚಿಕೊಳ್ಳುತ್ತಾರೆ. ಆದರೆ ಕಷ್ಟ ಅನುಭವಿಸುತ್ತಿರುವುದು ಮಾತ್ರ ವಾಹನ ಚಾಲಕರು.

ಬೆಳಿಗ್ಗೆ ಹಾಗೂ ಸಂಜೆ ವೇಳೆ ಮಕ್ಕಳೊಂದಿಗೆ ದ್ವಿಚಕ್ರ ವಾಹನದಲ್ಲಿ ಸಂಚರಿಸುವ ಮಹಿಳೆಯರು, ಶಾಲಾ ವಾಹನಗಳು ಜೀವ ಕೈಯಲ್ಲಿಡಿದು ಸಂಚರಿಸುವಂತಾಗಿದೆ. ಹಲವರು ಬಿದ್ದು ಎದ್ದು ಹೋಗಿದ್ದಾರೆ. ಇನ್ನು ಎಪಿಎಂಸಿಗೆ ಧಾನ್ಯ ಹೊತ್ತು ತರುವ ಟ್ರ್ಯಾಕ್ಟರ್, ಲಾರಿಗಳದ್ದೂ ಅದೇ ಸಮಸ್ಯೆ. ಇಲ್ಲಿನ ವರ್ತಕರಂತೂ ಈ ಗುಂಡಿಗಳ ಸಮಸ್ಯೆಗೆ ಹೈರಾಣಾಗಿದ್ದಾರೆ. ಪ್ರಾಯಶಃ ಈ ರಸ್ತೆ ಬಲಿ ಪಡೆದ ನಂತರವೇ ರಿಪೇರಿಗೆ ಮುಂದಾಗಬಹುದೇನೋ? ಎಂಬುದು ಇಲ್ಲಿನ ಪ್ರಯಾಣಿಕರ ನೊಂದ ನುಡಿ. ಕೊನೆ ಪಕ್ಷ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಜಿಲ್ಲಾಡಳಿತವಾದರೂ ಈ ರಸ್ತೆ ಬಗ್ಗೆ ಗಮನ ಹರಿಸಲಿ.